ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಅವರು ಆ ಮನೆಯಲ್ಲಿದ್ದಾರೆ. ಅದಕ್ಕೆ ಉತ್ತರ ನಾಳೆ ಕೊಡಿಸಿತ್ತೇವೆ. ಮಾಲೀಕಯ್ಯ ಗುತ್ತೇದಾರ್ ಅವರೆ, ಗುಲ್ಬರ್ಗ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಬಗ್ಗೆ ಗಮನ ಸೆಳೆಯಿರಿ.

ಡಾ॥ ಎ. ಬಿ. ಮಾಲಕರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನನಗೆ authorize ಮಾಡಿದ್ದಾರೆ. ಮಾನ್ಯ ಸಚಿವರೆ, statement ಕೊಡಿ.

ಉಪಾಧ್ಯಕ್ಷರು : ಮಾನ್ಯ ಸಹಕಾರ ಮಂತ್ರಿಗಳು statement ತಂದ ಮೇಲೆ ಕೊಡಿ. Next ತುಕಾರಾಂ ಕೇಳಿ. ಅವರು ಇಲ್ಲ.

(ಮಾನ್ಯ ಸದಸ್ಯರಾದ ಈ. ತುಕಾರಾಂರವರು ಗೈರುಹಾಜರು)

ಉಪಾಧ್ಯಕ್ಷರು : ಡಿ. ನಾಗರಾಜಯ್ಯನವರೆ ಕೇಳಿ.

(ಮಾನ್ಯ ಸದಸ್ಯರಾದ ನಾಗರಾಜಯ್ಯನವರು ಗೈರುಹಾಜರು)

7. ನಿಯಮ 69ರ ಮೇದರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ.

(1) ವಿಷಯ: ರಾಜ್ಯದ 15 ಜಿಲ್ಲೆಗಳ 130ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಮಳೆಯ ಕೊರತೆಯಿಂದ ಬರಗಾಲ ಉಂಟಾಗಿರುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ): ಮಾನ್ಯ ಉಪಾಧ್ಯಕ್ಷರೆ, ನಾವು ನಿಯಮ 60ರ ಅಡಿಯಲ್ಲಿ ರಾಜ್ಯ ಭೀಕರ ಬರಗಾಲವನ್ನು ಏನು ಎದುರಿಸುತ್ತಿದೆ, ನಾವು ಈ ವಿಷಯ ಕುರಿತಂತೆ ಚರ್ಚಿಸುವುದಕ್ಕೋಸ್ಕರವಾಗಿ ಅವಕಾಶವನ್ನು ಕೇಳಿದ್ದೆವು. ತಾವು ಅದನ್ನು ಇವತ್ತು ನಿಯಮ 69ಕ್ಕೆ ಪರಿವರ್ತಿಸಿ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ರಾಜ್ಯ ಬರಗಾಲವನ್ನು ಮೊದಲ ಬಾರಿಗೆ ನೋಡುತ್ತಿದೆಯೆಂದು ಅಲ್ಲ. ನಾವು ಹಿಂದೆ ಭಾರತೀಯ ಜನತಾ ಪಾರ್ಟಿ ನಮ್ಮ ಸರ್ಕಾರ ಆಡಳಿತ ಮಾಡುವಾಗಲೂ ಸಹ ರಾಜ್ಯ ಬರಗಾಲದ ಪರಿಸ್ಥಿತಿಯನ್ನು ಎದುರಿಸಿತ್ತು. ಅದಕ್ಕೂ ಹಿಂದಿನ

ಇತಿಹಾಸವನ್ನು ತೆಗೆದುಕೊಂಡರೂ ಸಹ ಅನೇಕ ಬಾರಿ ನಮ್ಮ ರಾಜ್ಯ ಬರಗಾಲ ಪರಿಸ್ಥಿತಿಯನ್ನು ಎದುರಿಸುವಂಥ ಸ್ಥಿತಿ ಇದೆ. ಇದಕ್ಕೆ ಪ್ರಕೃತಿ ಒಂದು ಕಾರಣವಾದರೆ, ಸಹಜವಾಗಿ ಪ್ರಕೃತಿಯ ಕಾರಣ ಇದ್ದೇ ಇದೆ. ಏಕೆಂದರೆ, ಸರಿಯಾದ ಸಮಯಕ್ಕೆ ಸರಿಯಾದ ಸ್ಥಳದಲ್ಲಿ ಬಾರದೇ ಇರುವುದರಿಂದ ಈ ರೀತಿ ಬರಗಾಲ ನಿರ್ಮಾಣವಾಗಿರುವುದನ್ನು ನಾವು ಕಾಣುತ್ತೇವೆ. ಇದರ ಜೊತೆಯಲ್ಲಿ ಸರ್ಕಾರಗಳೂ ಸಹ ಇಂಥ ಪರಿಸ್ಥಿತಿಗಳು ನಿರ್ಮಾಣವಾದಾಗ ಅದನ್ನು ಹೇಗೆಂಬುದರ ಬಗ್ಗೆ ಇಷ್ಟು ವರ್ಷಗಳಲ್ಲಿ ಸಮರ್ಥವಾಗಿ ಯೋಜನೆಗಳನ್ನು ಮಾಡದೇ ಇರುವುದರಿಂದಲೂ ಸಹ ಬರಗಾಲದ ಭೀಕರತೆಗಳನ್ನು ಹೆಚ್ಚಾಗುತ್ತಿವೆ. ನಮ್ಮಲ್ಲಿ ಒಟ್ಟು ನೀರಾವರಿ ಪ್ರದೇಶಗಳಿಗೆ ಅದು ಕಾವೇರಿ ಬೇಸಿನ್ ಇರಲಿ, ಕೃಷ್ಣ ಬೇಸಿನ್ ಇರಲಿ, ಯಾವ್ಯಾವ ಬೇಸಿನ್‌ಗಳಿವೆಯೋ, ಆ ಎಲ್ಲಾ ಬೇಸಿನ್‌ಗಳಿಗೆ ನಾವು ಯಾವ ಆದ್ಯತೆಯನ್ನು ಕೊಡಬೇಕಾಗಿತ್ತೋ, ಅದನ್ನು ಕೊಡದೇ ಇರುವುದರಿಂದ ಬರಗಾಲದ ಭೀಕರತೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಾವು ಕೇವಲ ಪ್ರಕೃತಿಯ ಮೇಲೆ ಮಾತ್ರ ಭಾರ ಹಾಕಿ, ದೇವರು ಕೊಟ್ಟರೆ ಮಳೆಯಾಗುತ್ತದೆ, ಮಳೆಯಾದರೆ ನಮಗೆಲ್ಲಾ ಬೆಳೆಯಾಗುತ್ತದೆಂದು, ನಾವು ಸರ್ಕಾರವಾಗಿ ಮಾಡಬೇಕಾದಂಥ ಕೆಲಸ–ಕಾರ್ಯಗಳನ್ನು ಸಮರ್ಥವಾಗಿ ಮಾಡದೇ, ನಾವು ಬರಗಾಲದ ಪರಿಸ್ಥಿತಿಯನ್ನು ದಿನದಿಂದ ದಿನಕ್ಕೆ ಹೆಚ್ಚು ಅನುಭವಿಸುವಂಥ ಸ್ಥಿತಿ ಬಂದಿದೆ. ನಾನು ಈ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ, ನಾವು ಐದು ವರ್ಷಗಳು ಆಡಳಿತ ಮಾಡಿದ್ದೇವೆ, ಸಮ್ಮಿಶ್ರ ಸರ್ಕಾರದಲ್ಲಿ ಏಳು ವರ್ಷ ಆಡಳಿತ ಮಾಡಿದ್ದೇವೆ. ಜನತಾ ದಳ 5–10 ವರ್ಷಗಳು ಆಡಳಿತ ಮಾಡಿದೆ. ಇದೆಲ್ಲಾ ಒಟ್ಟು ಲೆಕ್ಕ ಹಾಕಿದರೂ ಈ ಕಡೆ ಆಡಳಿತ ಮಾಡಿದವರು 15 ವರ್ಷಗಳು ದಾಟುವುದಿಲ್ಲ. ಆದರೆ ಆ ಕಡೆ ಇರುವಂತ ಕಾಂಗ್ರೆಸ್ ಪಕ್ಷ ಆಡಳಿತ ಮಾಡುತ್ತಿರುವಂಥ ನೀವುಗಳು ಸರ್ಕಾರವಾಗಿ ಹೇಳುವಂಥದ್ದು, ನಾನು ಇದರಲ್ಲಿ ವ್ಯಕ್ತಿಗಳು ಬದಲಾಗಿರುತ್ತಾರೆ, ಅವರು ಯಾರೆಂದು ಹೇಳುವುದಕ್ಕೆ ಬಯಸುವುದಿಲ್ಲ. ಈ ರೀತಿ ನಮ್ಮ ರಾಜ್ಯ ಭೀಕರ ಬರಗಾಲವನ್ನು ಎಪ್ಪತ್ತರ ದಶಕದ್ದು ಇನ್ನೂ ಹಳೆಯದು ಇದೆ,

ಅದನ್ನೆಲ್ಲಾ ನೋಡಿರುವಂಥವರು, ರಾಜ್ಯಕ್ಕೆ ಈ ರೀತಿ ಒಂದು ಸಂದರ್ಭ ಬಂದಾಗ ಅದನ್ನು ಸಮರ್ಥರಾಗಿ ಎದುರಿಸುವುದು ಹೇಗೆಂಬ ದೀರ್ಘಕಾಲಿಕವಾದಂಥ ಯೋಜನೆಗಳನ್ನು ಸರ್ಕಾರಗಳು ಮಾಡಿಲ್ಲ. ನನಗೆ ಸರ್ಕಾರದ ವ್ಯವಸ್ಥೆಯನ್ನು ನೆನಪಿಸಿಕೊಂಡರೆ ಭಯವಾಗುತ್ತದೆ, ಆಡಳಿತ ಪಕ್ಷ ಹೇಗೆ ನಡೆಸಿಕೊಂಡು ಹೋಗುತ್ತದೆಂಬುದಕ್ಕೆ ಕಾರಂಜಾ ಯೋಜನೆ ಪ್ರಾರಂಭವಾಗಿದ್ದು, ಈ ರೀತಿ ಬರಗಾಲ ಬಂದಂಥ ಸಂದರ್ಭದಲ್ಲೇ ಆಗಿದ್ದು, ಇದಕ್ಕೆ 50 ಕೋಟಿ ರೂ.ಗಳ ಯೋಜನೆಯನ್ನು ಮಾಡಿದ್ದು, ಇವತ್ತು 600 ಕೋಟಿ ರೂ.ಗಳಾದರೂ ಮುಗಿದಿಲ್ಲ. ಇನ್ನು 100-200 ಕೋಟಿ ರೂ.ಗಳು ಬೇಕೆಂಬ ಸ್ಥಿತಿ ಇದೆ. ಈಗ ಬರಗಾಲಕ್ಕೆ ತುತ್ತಾಗಿರುವಂಥ ಪ್ರದೇಶಕ್ಕೆಂದೇ ಈ ಯೋಜನೆಗಳು ರೂಪಿಸಲಾಗಿರುವುದು. ತಾವು ಈ ರೀತಿ ರಾಜ್ಯದ ನೀರಾವರಿ ಯೋಜನೆಗಳನ್ನು ನಿರ್ಲಕ್ಷ್ಯ ಮಾಡಿ, ನಾವು ಈ ರೀತಿಯ ಬರಗಾಲದ ಸಂಕಷ್ಟವನ್ನು ಜನರು ಅನುಭವಿಸುವಂಥ ಸ್ಥತಿಗೆ ಸರ್ಕಾರಗಳು ತಂದಿರುವುದನ್ನು ಕಾಣುತ್ತಿದ್ದೇವೆ. ಹಾಗಾಗಿ ನಾವು ಮೂಲಭೂತವಾಗಿ ಪ್ರಕೃತಿ ಬಗ್ಗೆ ಎಷ್ಟೇ ಹೇಳಬಹುದು, ಪ್ರಕೃತಿ ಹಾಗೆ ಮಾಡುತ್ತದೆ, ಹೀಗೆ ಮಾಡುತ್ತದೆ, ಪ್ರಕೃತಿ ಜೊತೆಯಲ್ಲಿ ಇರಬೇಕಾಗುತ್ತದೆಂದು ಹೇಳಬಹುದು. ಆದರೆ ಪ್ರಕೃತಿ ಯಾವ ರೀತಿ ವರ್ತಿಸುತ್ತದೆಂಬುದನ್ನು ಇಲ್ಲಿ analysis ಮಾಡುವಂಥ ಸಾಕಷ್ಟು ಜನ ವಿಜ್ಞಾನಿಗಳು ಇದ್ದಾರೆ. ಅವರ analysis ಅನ್ನು ನೋಡಿದಾಗ ಒಂದು ಸಲ ಹೆಚ್ಚು, ಒಂದು ಸಲ ಕಡಿಮೆ ಈ ರೀತಿ ಪ್ರಕೃತಿಯಲ್ಲಿ ಇದ್ದೇ ಇರುತ್ತದೆ. ಅದಕ್ಕೆ ಕಾರಣಗಳು ನೂರೆಂಟು ಇವೆ. ಆದರೆ ನಾವು ಸರ್ಕಾರವಾಗಿ ಸಮರ್ಥವಾಗಿ ಎದುರಿಸುವುದಕ್ಕೆ ಯೋಜನೆಗಳನ್ನು ಮಾಡದೇ ಇರುವಂಥದ್ದು, ಇದು ಎದ್ದು ಕಾಣುತ್ತಿದೆ. ಹಾಗಾಗಿ ನಾನು ಇವತ್ತು ಮೊಟ್ಟಮೊದಲನೆಯದಾಗಿ ಆಗ್ರಹಪಡಿಸುವಂಥದ್ದು ಏನೆಂದರೆ, ನಾನು ಈಗ ಎಷ್ಟು ಜಿಲ್ಲೆಯಲ್ಲಿ, ಎಷ್ಟು ತಾಲ್ಲೂಕುಗಳಲ್ಲಿ ಏನೇನು ಕಷ್ಟ-ಸುಖಗಳಾಗಿದೆಯೆಂಬುದನ್ನೆಲ್ಲಾ ಹೇಳುತ್ತೇನೆ. ಆದರೆ ಇಲ್ಲಿ ನಾನು ಮೊಟ್ಟ ಮೊದಲನೆಯದಾಗಿ ಸರ್ಕಾರಕ್ಕೆ ಆಗ್ರಹಪಡಿಸುವುದೇನೆಂದರೆ, ನಾವು ದೀರ್ಘಕಾಲಿಕವಾದಂಥ ಯೋಜನೆಗಳನ್ನು ಬರಗಾಲವನ್ನು ಎದುರಿಸುವುದಕ್ಕೆ ಬೇಕಾದಂಥ ಯೋಜನೆಗಳನ್ನು

ರೂಪಿಸಲೇಬೇಕು. ಅದರೊಳಗೆ ಬೃಹತ್ ನೀರಾವರಿ ಯೋಜನೆಗಳು ಒಂದು, ಅದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ನಾವು ಬಜೆಟ್ ಮೇಲೆ ಚರ್ಚೆ ಮಾಡುವಾಗಲೂ ನಿಮ್ಮ ಸರ್ಕಾರಕ್ಕೆ ಎಷ್ಟು ಬದ್ಧತೆ ಇದೆಯೆಂಬುದನ್ನು ಹೇಳಿದ್ದೇವೆ. ಕೃಷ್ಣಾ ಬೇಸಿನ್‌ಗೆ ವರ್ಷಕ್ಕೆ 10,000 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದವರು, ಒಟ್ಟು ನೀರಾವರಿ ಯೋಜನೆಗೆ 11,000 ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದಾರೆ. ಇದರಲ್ಲಿ ಏನು ಮಾಡುವುದಕ್ಕೆ ಆಗುತ್ತದೆಂಬುದು ಇದರಿಂದ ಅರ್ಥವಾಗುತ್ತದೆ. ದೊಡ್ಡ ದೊಡ್ಡ ಬೃಹತ್ ನೀರಾವರಿ ಯೋಜನೆಗಳು ಯಾವ್ಯಾವ ಬೇಸಿನ್‌ನಲ್ಲಿ ಆಗಬೇಕು, ಅವನ್ನು ನಾವು ಬದ್ಧತೆಯಿಂದ ಮಾಡದೇ ಹೋದರೆ, ನಾವು ಬರುವ ದಿವಸಗಳಲ್ಲಿ ಇನ್ನಷ್ಟು ಹೆಚ್ಚು ಭೀಕರತೆಯ ಪರಿಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ. ಅದೇ ರೀತಿ ದೊಡ್ಡ ನೀರಾವರಿ ಯೋಜನೆಯ ಜೊತೆಯಲ್ಲೆ ಚಿಕ್ಕ ನೀರಾವರಿ ಯೋಜನೆಗಳ ಜವಾಬ್ದಾರಿಯೂ ಅಷ್ಟೇ ಇದೆ. ಚಿಕ್ಕ ನೀರಾವರಿ ಯೋಜನೆಯನ್ನೂ ಸಹ ಅದೇ ಪ್ರಮಾಣದಲ್ಲಿ ಆದ್ಯತೆಯಿಂದ ತೆಗೆದುಕೊಳ್ಳಬೇಕಾದಂಥ ಕ್ರಮವಿದೆ. ನಮ್ಮ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ ಈ ರೀತಿ ಕೆಲವು ಇಲಾಖೆಗಳು ಕೃಷಿ ಹೊಂಡಗಳನ್ನು ತೆಗೆಯುತ್ತಾರೆ. ಭೂಮಿಯೊಳಗೆ ನೀರು ಇಂಗಿಸುವಂಥ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಇವತ್ತು ಅದ್ಯಾವುದಕ್ಕೂ ಸಹ ಆದ್ಯತೆ, ಪ್ರಾಮುಖ್ಯತೆ ಇಲ್ಲದೇ ಕೇವಲ ಅಂಕಿ-ಸಂಖ್ಯೆಗೆ ಕೆಲವು ಉದಾಹರಣೆಗಳನ್ನು ತೋರಿಸುವುದಕ್ಕೆ ಮಾತ್ರ ಸೀಮಿತವಾಗಿರುವಂಥದ್ದು ಇದೆ. ನಾನು ಬೃಹತ್ ನೀರಾವರಿ ಇಲಾಖೆಯ ಜೊತೆಯಲ್ಲಿ ಚಿಕ್ಕ ನೀರಾವರಿ ಇಲಾಖೆ ಮತ್ತು ಉಳಿದೆಲ್ಲಾ ಇಲಾಖೆಗಳೆಂದರೆ ಅವು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಅರಣ್ಯ ಇಲಾಖೆಗಳಲ್ಲಿ ಭೂಮಿಯೊಳಗೆ ನೀರು ಇಂಗುವಂಥ ಪ್ರಯತ್ನವನ್ನು ವಿಶೇಷವಾಗಿ ಮಾಡಬೇಕಾದಂಥ ಅಗತ್ಯತೆ ಇದೆ. ನಾವು ಈ ರೀತಿಯಾಗಿ ದೀರ್ಘಕಾಲಿಕವಾಗಿ ಯೋಚಿಸದೇ, ನಾವು ಈ ವರ್ಷ ಮಳೆಯಾಗಿಲ್ಲ, ಮುಂದಿನ ವರ್ಷ ಮಳೆಯಾಗುತ್ತದೆ. ನಾವು ಮಳೆ ಪ್ರಕೃತಿ, ದೇವರು ಎಂದು ಇದನ್ನೇ ಮತ್ತೆ ಮತ್ತೆ ಮಾತನಾಡಿಕೊಂಡು, ಹೇಳಿಕೊಂಡು,

ಸರ್ಕಾರವಾಗಿ ಮಾಡಬೇಕಾಗಿರುವಂಥ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವುದಿಲ್ಲವೆನ್ನುವಂಥ ಸಂದೇಶ ಜನರಿಗೆ ಹೋಗುತ್ತದೆ. ಹಿಂದೆ ರಾಜ–ಮಹಾರಾಜರೆಲ್ಲಾ ಕೆರೆಗಳನ್ನು ಕಟ್ಟಿದರೆಂದು ಹೇಳುತ್ತೇವೆ. ನಾವು ಇವತ್ತು ರಾಜ್ಯದಲ್ಲಿ 35,000, 40,000 ಕೆರೆಗಳಿವೆಯೆಂದು ಹೇಳುತ್ತೇವೆ. ಈ ಕೆರೆಗಳನ್ನು ಏಕೆ ಕಟ್ಟಿದ್ದರು? ಆಗಲೂ ಎಲ್ಲರೂ ಈ ರೀತಿಯ ಪರಿಸ್ಥಿತಿಯನ್ನು ಅನುಭವಿಸಿದ್ದಾರೆ. ಈ ಪರಿಸ್ಥಿತಿ ನಮಗೆ ಸ್ವಾತಂತ್ರ್ಯ ಬಂದ ನಂತರ ನಮ್ಮ ಕರ್ನಾಟಕ ರಾಜ್ಯವಾದ ನಂತರವೇ ಬರಗಾಲ ಬಂದಿದೆಯೆಂದು ಅಲ್ಲ. ಈ ರೀತಿ ಪ್ರಕೃತಿಯಲ್ಲಿ ಯವತ್ತಿಗೂ ಸಹಿತ ಏರಿಳಿತಗಳು ಇದ್ದೇ ಇದೆ. ಆಯಾ ಸಂದರ್ಭದಲ್ಲಿ ಆವತ್ತಿನ ಆಡಳಿತಗಾರರು ಅದಕ್ಕೆ ತಕ್ಕಂತಹ ಯೋಜನೆಗಳನ್ನು ಆದ್ಯತೆಯಿಂದ ರೂಪಿಸಿ ಅದನ್ನು ಮಾಡಿದರು. ಆದರೆ ಇವತ್ತು ಆಡಳಿತಕ್ಕೆ ಬಂದಂಥ ಸರ್ಕಾರಗಳು, ಅದರಲ್ಲೂ ವಿಶೇಷವಾಗಿ ಮಾನ್ಯ ಜಯಚಂದ್ರರವರೆ, ಇವತ್ತು ತಮ್ಮ ಸರ್ಕಾರ ಆಡಳಿತದಲ್ಲಿದೆ. ತಾವುಗಳು ಇದಕ್ಕೆ ಆದ್ಯತೆ ಕೊಡಲೇ ಬೇಕಾದಂಥ ಸಂದರ್ಭ ಬಂದಿದೆ. ಇದನ್ನು ಕೇವಲ ನಮ್ಮ ರಾಜ್ಯವೆಂದು ನೋಡುವುದಕ್ಕಿಂತಲೂ global warming ನ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗಿದೆ. ಇವತ್ತು ಪ್ರಕೃತಿಯಲ್ಲಿ ಯಾವ ರೀತಿಯ ವ್ಯತ್ಯಾಸಗಳ ನಿರ್ಮಾಣವಾಗುತ್ತಿಯೆನ್ನುವ ಹಿನ್ನೆಲೆಯಲ್ಲಿ ನೋಡಬೇಕಾದಂಥ ಅಗತ್ಯತೆ ಇದೆ. ಆ ಹಿನ್ನೆಲೆಯಲ್ಲಿ ನಾವು ಭೂಮಿಯೊಳಗೆ ನೀರನ್ನು ಇಂಗಿಸಿ, ಕೃಷಿಗೆ. ಕುಡಿಯುವುದಕ್ಕೆ, ದನ–ಕರುಗಳಿಗೆ, ಪಶು–ಪಕ್ಷಿಗಳಿಗೆ, ಮೇವಿಗೆ ಎಲ್ಲಾ ರೀತಿಯಲ್ಲೂ ನೀರಿನ ಮೂಲವನ್ನು ಬಲಪಡಿಸುವಂಥ ಸ್ಥಿತಿಗೆ ಬರಬೇಕು. ನಾವು ಮಾತೆತ್ತಿದರೆ ಇಸ್ರೇಲ್ ಬೇರೆ ಬೇರೆ ದೇಶಗಳ ಉದಾಹರಣೆಗಳನ್ನು ಕೊಡುತ್ತೇವೆ. ಆದರೆ ಎಷ್ಟು ವಿಪುಲವಾಗಿ ಮಳೆಯಾಗುವಂಥ ನಮ್ಮ ರಾಜ್ಯದಲ್ಲಿ,ಇಷ್ಟು ಸಮೃದ್ಧತೆ ಇರುವಂಥ ನಮ್ಮ ರಾಜ್ಯದಲ್ಲಿ, ನಾವು ನಮ್ಮ ಯೋಜನೆಗಳ ವಿಫಲತೆಯಿಂದಾಗಿ ಬರಗಾಲದ ಸ್ಥಿತಿಯನ್ನು, ಬವಣೆಯನ್ನು ಇನ್ನಷ್ಟು ಹೆಚ್ಚು ಅನುಭವಿಸುವಂಥ ಸ್ಥಿತಿ ಬಂದಿದೆ. ಮಾನ್ಯ ಉಪಾಧ್ಯಕ್ಷರೆ, ತಾವು ಕೋಲಾರದಲ್ಲಿ ನೋಡಿದ್ದೀರಿ, ಕೋಲಾರದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಆ ಭಾಗದಲ್ಲಿ ಬೋರ್‌ವೆಲ್‌ಗಳು 1000, 1200, 1300

ಅಡಿ ಆಳಕ್ಕೆ ಹೋಗುತ್ತಿದೆಯೆಂದು ನಾವೆಲ್ಲಾ ಆ ಭಾಗದ ಜನರಿಂದ ಕೇಳಿದ್ದೇವೆ, ಓದಿದ್ದೇವೆ. ನಿಮಗೆಲ್ಲಾ ಅದರ ಪ್ರತ್ಯೇಕ್ಷ ಅನುಭವವಿದೆ. ಈ ರೀತಿಯ ಪರಿಸ್ಥಿತಿಗಳು ಏಕೆ ಬರಬೇಕು? ನಾವು ಆಗುವ ಮಳೆಯನ್ನೂ ಸಹ ಭೂಮಿಯೊಳಗೆ ಹಿಡಿದಿಟ್ಟುಕೊಳ್ಳುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ, ಅದು ಸಮುದ್ರ್ರದ ಸೇರುವಂಥ ಸ್ಥಿತಿ ಇದೆ, ಅಥವಾ ಅದು waste. ಬೇರೆ ಬೇರೆ ರಾಜ್ಯಗಳಿಗೆ ಇದೆ, ಅದು ಸಮುದ್ರ ಸೇರುವಂಥ ಸ್ಥಿತಿ ಇದೆ. ಹಾಗಾಗಿ ದೀರ್ಘಕಾಲಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂಥದ್ದೇ ಇಂಥ ಬರಗಾಲದ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ನಮ್ಮ ಬದ್ಧತೆಯನ್ನು ತೋರಿಸಬೇಕಾದಂಥ ಅಗತ್ಯತೆ ಇರುವಂಥದ್ದು. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮತ್ತೊಮ್ಮೆ ಆಗ್ರಹಿಸುತ್ತೇನೆ. ಮೊಟ್ಟ ಮೊದಲನೆಯದಾಗಿ, ಭೂಮಿಯಲ್ಲಿ ನೀರು ಇಂಗುವುದಕ್ಕೆ ಬೇಕಾದಂಥ, ನೀರಿನ ಮೂಲವನ್ನು ಬಲಪಡಿಸುವುದಕ್ಕೆ ಬೇಕಾದಂಥ ಯೋಜನೆಗಳನ್ನು ನಮ್ಮ ಉಳಿದೆಲ್ಲಾ ಇಲಾಖೆಗಳು ಹಾಕಿಕೊಳ್ಳಬೇಕು. ಇವತ್ತು ಕೃಷಿ ಇಲಾಖೆಯವರು ಕೃಷಿ ಹೊಂಡವೆಂದು ಮಾಡುತ್ತಾರೆ. ಅವರು ಅರ್ಥವಿಲ್ಲದಂಥ ಕೃಷಿ ಹೊಂಡಗಳನ್ನು ಮಾಡುತ್ತಾರೆ, ಇತ್ತೀಚೆಗೆ ಅದು ಬಂದ್ ಆಗಿದೆ. ಇಲ್ಲಿ ನಿನ್ನೆ ಎಲ್ಲಾ ಕೆರೆಗಳ ಬಗ್ಗೆ ಚರ್ಚೆಯಾಗಿದೆ, ಮತ್ತೆ ನಾನು ಅದನ್ನೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಇಲಾಖೆಗಳ ಬಗ್ಗೆ ಹೇಳುತ್ತೇನೆ. ಅರಣ್ಯ ಇಲಾಖೆಯ ಮಂತ್ರಿಗಳಾದ ಮಾನ್ಯ ರಮಾನಾಥ ರೈರವರು ಇಲ್ಲೇ ಇದ್ದಾರೆ. ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದಾಗ, ಇದರಲ್ಲಿ ತಮ್ಮ ಜವಾಬ್ದಾರಿಯೂ ಇದೆ, ಶೇ.30–40ರಷ್ಟು ಅರಣ್ಯವಿರಬೇಕೆಂದು ಇವರು ಬಯಸುತ್ತಾರೆ. ಆದರೆ ಇರುವ ಅರಣ್ಯ ಪ್ರದೇಶದಲ್ಲಾದರೂ ಹೊಂಡಗಳನ್ನು ಮಾಡಿ ಭೂಮಿಯಲ್ಲಿ ನೀರು ಇಂಗುವಂಥ ಸ್ಥಿತಿಯನ್ನು ನಾವು ತರದೇ ಹೋದರೆ ಮುಂದೆ ಸಮಸ್ಯೆಯಾಗುತ್ತದೆ. ಈಗ ಆನೆಗಳು ಇರುವ ಪ್ರದೇಶದಲ್ಲಿ ಮತ್ತು ಬೇರೆ ಬೇರೆ ಪ್ರಾಣಿಗಳು ಇರುವ ಪ್ರದೇಶದಲ್ಲಿ ಹೊಂಡಗಳನ್ನು ಮಾಡುತ್ತಿದ್ದೀರಿ. ಆದರೆ ಅರಣ್ಯ ಇಲಾಖೆಯು ಇದನ್ನು ಸಾರ್ವತ್ರಿಕವಾಗಿ ಮಾಡಬೇಕು. ಕೇವಲ ಪ್ರಾಣಿಗಳು ಇರುವ ಪ್ರದೇಶದಲ್ಲಿ ಮಾತ್ರವಲ್ಲ, ಭೂಮಿಯಲ್ಲಿ ನೀರು

ಇಂಗಬೇಕು ಎನ್ನುವಂಥ ಉದ್ದೇಶದಿಂದಲೇ ಇದನ್ನು ಮಾಡಬೇಕು. ನಿಮ್ಮ ಇಲಾಖೆಯದು ಬಹಳ ದೊಡ್ಡ ಪ್ರಮಾಣದ ಭೂಮಿ ಇದೆ. ಇಷ್ಟು ದೊಡ್ಡ ಪ್ರಮಾಣದ ಭೂಮಿಯಲ್ಲಿ ತಾವು ಉದ್ದೇಶಪೂರ್ವಕವಾಗಿ ನೀರು ಇಂಗಿಸುವಂಥ ಪ್ರಯತ್ನಗಳನ್ನು ಎಲ್ಲ ಇಲಾಖೆಗಳ ಸಮನ್ವಯತೆಯಿಂದ ಮಾಡಬೇಕು. ಈ ರೀತಿಯ ಯೋಜನೆಗಳನ್ನು ಮಾಡಿದರೆ ಮಾತ್ರ ಇವತ್ತು ಎದುರಾಗಿರುವಂಥ ಬರಗಾಲದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನಷ್ಟು ಹೊಸ ಹೊಸ ನೀರಾವರಿ ಯೋಜನೆಗಳನ್ನು, ಬೃಹತ್ ನೀರಾವರಿ ಯೋಜನೆಗಳನ್ನು, ಚಿಕ್ಕ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೂ ಸಹ ಆದ್ಯತೆಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಆಗ್ರಹಿಸುವುದಕ್ಕೆ ಬಯಸುತ್ತೇನೆ. ಇವತ್ತು ಪ್ರಸ್ತುತವಾಗಿ ನಮ್ಮ ರಾಜ್ಯದಲ್ಲಿ ಸುಮಾರು 16 ಜಿಲ್ಲೆಗಳಲ್ಲಿ, ನೂರಕ್ಕಿಂತ ಹೆಚ್ಚು ತಾಲ್ಲೂಕುಗಳಲ್ಲಿ ಬರಗಾಲದ ಪರಿಸ್ಥಿತಿ ಇದೆ. ಒಂದು ಕಡೆಯಲ್ಲಿ ಅತಿವೃಷ್ಟಿಯಿಂದಾಗಿ ಕಷ್ಟ ಅನುಭವಿಸುತ್ತಿರುವಂಥ ಮಲೆನಾಡಿನ ಜಿಲ್ಲೆಗಳಿವೆ. ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಈ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗಿ ಅಡಿಕೆಗೆ ಬಂದ ಕೊಳೆ ರೋಗದಿಂದ ಹಿಡಿದು, ಮಳೆ ಬಂದುದದರಿಂದ ರಸ್ತೆ ಸರಿಯಿಲ್ಲ, ರಸ್ತೆಗಳು ಮಳೆಯಲ್ಲಿ ಕೊಚ್ಚಿ ಹೋಗಿವೆ, ಈ ರೀತಿಯ ಕಷ್ಟಗಳನ್ನು ಹೆಚ್ಚಾಗಿ ಅತಿವೃಷ್ಟಿಯಿಂದ ಅನುಭವಿಸುತ್ತಿರುವ ಕಷ್ಟದ ಭಾಗ ಒಂದು ಕಡೆ ಇದ್ದರೆ, ಅಷ್ಟೇ ಮುಖ್ಯವಾಗಿರುವಂಥ ಇನ್ನೊಂದು ಭಾಗವೆಂದರೆ ಬರಗಾಲಕ್ಕೆ ತುತ್ತಾಗಿರುವಂಥ ಈ ಕಡೆ ಇರುವ ಜಿಲ್ಲೆಗಳ ಪರಿಸ್ಥಿತಿ. ಬರಗಾಲಕ್ಕೆ ತುತ್ತಾದಂಥ ಸಂದರ್ಭದಲ್ಲಿ ಸಹಜವಾಗಿ ಒಂದು ಸರ್ಕಾರ ಏನು ಮಾಡಬೇಕೋ ಅದನ್ನು ಪರಿಸ್ಥಿತಿಯನ್ನು ನಾವು ಕಾಣುತ್ತಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ಇಲ್ಲಿ ಉಪಸ್ಥಿತರಿದ್ದೀರಿ. ನಾನು ನಿಮಗೂ ಹೇಳುವುದಕ್ಕೆ ಬಯಸುತ್ತೇನೆ, ಕಂದಾಯ ಸಚಿವರಾದ ತಮ್ಮ ಅಧ್ಯಕ್ಷತೆಯಲ್ಲೇ ಬರ ಪರಿಹಾರ ಕಾಮಗಾರಿಗಳ ಮೇಲುಸ್ತುವಾರಿಯನ್ನು ನೋಡುವಂಥ ಉನ್ನತ ಮಟ್ಟದ ಸಮಿತಿಯಿದೆ.

ಉನ್ನತ ಮಟ್ಟದ ಸಮಿತಿಯ ಸಭೆಯನ್ನು ಎಷ್ಟು ಸಲ ನಡೆಸಿದರು, ಯಾವ ಯಾವ ನಿರ್ಣಯಗಳನ್ನು ತೆಗೆದುಕೊಂಡರು, ಯಾವ ಯಾವ ರೀತಿಯ ನಿರ್ದೇಶನಗಳನ್ನು ಕೊಟ್ಟರು, ಅದರಲ್ಲಿ ಏನೇನು ಅನುಷ್ಠಾನವಾಗುತ್ತಿದೆ ಎನ್ನುವುದನ್ನು ಮಾನ್ಯ ಕಂದಾಯ ಸಚಿವರು ಈ ಸದನಕ್ಕೆ ತಿಳಿಸಬೇಕು. ತಾವು ಅನುಭವಿಗಳಿದ್ದೀರಿ, ಹಿರಿಯರಿದ್ದೀರಿ. ಆದರೆ ಇವತ್ತು ಸರ್ಕಾರದಿಂದ ಸ್ಪಷ್ಟವಾದಂಥ, ಬಿಗುವಾದಂಥ ಸಂದೇಶ ಜಿಲ್ಲೆಗಳಿಗೆ ಹೋಗದೇ ಇರುವುದರಿಂದ ಜಿಲ್ಲಾಧಿಕಾರಿಗಳಿಗಾಗಲೀ, ಅಸಿಸ್ಟೆಂಟ್ ಕಮಿಷನರ್‌ಗಳಿಗಾಗಲೀ, ತಹಶೀಲ್ದಾರ್‌ಗಳಿಗಾಗಲೀ ಇವರ್‍ಯಾರಿಗೂ ರಾಜ್ಯದಲ್ಲಿ ಬರ ಬಂದಿದೆ ಎಂದೇ ಅನ್ನಿಸುತ್ತಿಲ್ಲ. ಆ ರೀತಿಯ ಪರಿಸ್ಥಿತಿಯಲ್ಲಿದ್ದಾರೆ. ನೀವು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮಾಡಿದ್ದೀರಿ. ಯಾವ ಯಾವ ಕಾರ್ಯದರ್ಶಿಗಳು ಜಿಲ್ಲೆಗಳಿಗೆ ಹೋಗಿ ಬರ ಪರಿಹಾರ ಕಾಮಗಾರಿಗಳ ಮೇಲುಸ್ತುವಾರಿಯನ್ನು ನೋಡಿಕೊಂಡು ಬಂದಿದ್ದಾರೆ ಎನ್ನುವ ಅಂಕಿಸಂಖ್ಯೆಗಳನ್ನು ಕೊಡಿ. ತಾವು ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ಯಾರ್‍ಯಾರನ್ನು ಮಾಡಿದ್ದೀರಿ, ಅವರು ಬರದ ಬಗ್ಗೆ ಏನು ಮಾಡಿದ್ದಾರೆ ಎನ್ನುವುದನ್ನು ಹೇಳಲಿ. ಅವರು ಕಂದಾಯ ಸಚಿವರಿಗೆ ರಿಪೋರ್ಟ್ ಮಾಡಿದ್ದಾರೆ ಸಚಿವರು High Power Committeeಗೆ ಅದನ್ನು ಹೇಳಬೇಕು. ತಮ್ಮ ಉಸ್ತುವಾರಿ ಸಚಿವರುಗಳು ಯಾವ ಯಾವ ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಎಲ್ಲಿ ಪ್ರವಾಸ ಮಾಡಿದ್ದಾರೆ ಎನ್ನುವುದನ್ನು ಹೇಳಲಿ. ಉಸ್ತುವಾರಿ ಸಚಿವರುಗಳೂ ಸಹ ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸಲು ಜವಾಬ್ದಾರಿಯನ್ನು, ಕಳಕಳಿಯನ್ನು ತೋರಿಸಲಿಲ್ಲ. ಅದರ ಪರಿಣಾಮವಾಗಿ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಇನ್ಯಾರೂ ಕಳಕಳಿಯನ್ನು ತೋರಿಸಲಿಲ್ಲ. ಎಲ್ಲ ಹೇಗೆ ನಡೆಯುತ್ತಿದೆಯೋ ಹಾಗೆ ನಡೆಯುತ್ತಿದೆ ಎನ್ನುವ ಸ್ಥಿತಿ ಬರುತ್ತಿದೆ. ಹಾಗಾಗಿ ಈ ಸಂದರ್ಭದಲ್ಲಿ ನಾನು ಆಗ್ರಹಿಸುತ್ತಿರುವುದೇನೆಂದರೆ ಇಂತ ಪರಿಸ್ಥಿತಿ ಇರುವುದರಿಂದ ಈ ತಕ್ಷಣದಲ್ಲಿ ಮಾನ್ಯ ಕಂದಾಯ ಸಚಿವರು ಅಥವಾ ಸ್ವತಃ ಮುಖ್ಯಮಂತ್ರಿಗಳೇ ಬರಗಾಲದ ಪರಿಸ್ಥಿತಿಗೆ ತುತ್ತಾಗಿರುವಂಥ ಪ್ರದೇಶದ ಅಧಿಕಾರಿಗಳ ಜೊತೆ, ಮಂತ್ರಿಗಳ ಜೊತೆ, ಜನಪ್ರತಿನಿಧಿಗಳ ಜೊತೆ ಒಂದು

ಸಭೆಯನ್ನು ಮಾಡಿ, ಅಲ್ಲಿರುವಂಥ ಭೀಕರತೆಯನ್ನು ಅರ್ಥ ಮಾಡಿಕೊಂಡು ತಕ್ಷಣ ಹಣಕಾಸಿನ ನೆರವನ್ನು ಕೊಟ್ಟು ಅದು ಅನುಷ್ಠಾನವಾಗುತ್ತಿದೆಯೇ ಎನ್ನುವುದನ್ನು ಗಂಭೀರವಾಗಿ ನೋಡಬೇಕಾಗಿದೆ. ಆ ಹಿನ್ನೆಲೆಯಲ್ಲಿ ಅನೇಕ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕಾದಂಥ ಅಗತ್ಯತೆ ಇದೆ. ರಾಜ್ಯ ಮಟ್ಟದಲ್ಲಿ ಗಂಭೀರತೆ ಇಲ್ಲದಿದ್ದರೆ, ಅದು ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಗಂಭೀರತೆ ಬರುವುದಕ್ಕೆ ಸಾಧ್ಯವೇ ಇಲ್ಲ. ಹಾಗಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮ್ಮ ಅಧ್ಯಕ್ಷತೆಯಲ್ಲಿರುವಂಥ ಸಮಿತಿ ಮತ್ತು ತಾವು ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಂಡು ಅವರೂ ಸಹ ಇಂಥ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಮುಂದಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಈಗ ನಾವು ಫೆಬ್ರವರಿ ತಿಂಗಳಿನಲ್ಲಿದ್ದೇವೆ. ನಾನು ಇದನ್ನು ಮತ್ತಷ್ಟು ಆಗ್ರಹದಿಂದ ಹೇಳುತ್ತೇನೆ, ತಾವು ತುರ್ತಾಗಿ ಈ ಕೆಲಸ ಮಾಡಬೇಕು. ಮಾರ್ಚ್ ಮೊದಲ ವಾರದಲ್ಲಿ election code of conduct ಜಾರಿಗೆ ಬರುತ್ತದೆ ಎನ್ನುವುದು ನಮಗೆಲ್ಲ ಗೊತ್ತಿದೆ. ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲೇ ಬರಗಾಲದ ಭೀಕರತೆ ಹೆಚ್ಚಾಗುವುದು. code of conduct ಜಾರಿಯಲ್ಲಿರುವಾಗ, ನಾವೆಲ್ಲರೂ ಚುನಾವಣಾ ಪ್ರಚಾರದಲ್ಲಿರುವಾಗಲೇ ಆ ಬರಗಾಲದ ಭೀಕರತೆ ಸಹ ಹೆಚ್ಚಾಗುವುದು. ಆದ್ದರಿಂದ ತಾವು ಏನೇ ನಿರ್ಣಯ ತೆಗೆದುಕೊಳ್ಳಬೇಕಾದರೂ ಸಹ ಇನ್ನು ಹದಿನೈದು ದಿನಗಳ ಸಮಯದಲ್ಲಿ ತೆಗೆದುಕೊಳ್ಳಬೇಕು. ಬರಗಾಲವಿದ್ದಾಗ ಕುಡಿಯುವ ನೀರಿನ ಸಮಸ್ಯೆ ವಿಚಾರದಲ್ಲಿ code of conduct ಅನ್ವಯಿಸದಿದ್ದರೂ, ಶಾಸಕರ ಅಧ್ಯಕ್ಷತೆಯಲ್ಲಿರುವ ಸಮಿತಿಯ ಸಭೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಮಂತ್ರಿಗಳು ಸಭೆ ನಡೆಸಿ ಡೈರೆಕ್ಷನ್ ಕೊಡಲು ಆಗುವುದಿಲ್ಲ. ಅಧಿಕಾರಿಗಳು ತಮಗೆ ತೋಚಿದಂತೆ ಕಾರ್ಯಕ್ರಮಗಳನ್ನು ಮಾಡಿಕೊಂಡು ಇರುತ್ತಾರೆ. ಹಾಗಾಗಿ ಇದರ ಆದ್ಯತೆಯ ಹಿನ್ನೆಲೆಯಲ್ಲಿ ಮಾನ್ಯ ಕಂದಾಯ ಸಚಿವರು ಇದಕ್ಕೆ ಸ್ಪಷ್ಟವಾದಂಥ ನಿರ್ದೇಶನವನ್ನು ಮುಖ್ಯಮಂತ್ರಿಗಳಿಂದ ಕಳುಹಿಸುವಂಥದ್ದು ಆಗಬೇಕು. ಇಲ್ಲವೆಂದರೆ ಅಧಿಕಾರಿಗಳಿಗೆ ಇದರ

ಗಂಭೀರತೆ ಬರುವುದಿಲ್ಲ. ಅಧಿಕಾರಿಗಳು ಇರುವಂಥ ವ್ಯವಸ್ಥೆಯಲ್ಲಿ, ಅವರು ನಡೆದುಕೊಳ್ಳುವಂಥ ರೀತಿ–ನೀತಿಗಳಲ್ಲಿ, ಜನರ ಕಷ್ಟಸುಖಗಳ ಕುರಿತು ಅವರಿಗೆ ಗಂಭೀರತೆ ಬರುವುದಕ್ಕೆ ಸಾಧ್ಯವೇ ಇಲ್ಲ. ಈ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಾಗಿರುವಂಥ ನಾವು ಜನರ ಮಧ್ಯೆ ಇರುವಂಥವರು, ಜನರ ಕಷ್ಟ–ಸುಖಗಳನ್ನು ತಿಳಿದುಕೊಳ್ಳವಂಥವರು, ನಾವು ಅಧಿಕಾರಿಗಳಿಗೆ ಈ ಸಂದೇಶವನ್ನು ಕೊಟ್ಟು ಅವರು ಕೆಲಸ ಮಾಡುವಂತೆ ಮಾಡಬೇಕು. ನಾನು ಆಗಲೇ ಹೇಳಿದಂತೆ, ಉಸ್ತುವಾರಿ ಸಚಿವರು ಉಸ್ತುವಾರಿ ಕಾರ್ಯದರ್ಶಿಗಳನ್ನು ಕರೆದು ಸಭೆಯನ್ನು ಮಾಡಬೇಕು. ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಕಮಿಟಿ ಇರುತ್ತದೆ. ಅದಕ್ಕೆ ತಹಶೀಲ್ದಾರರು ಕಾರ್ಯದರ್ಶಿಗಳಗಿರುತ್ತಾರೆ. ಯಾರು, ಏನೂ ಮಾಡುವುದಿಲ್ಲ. ಇದುವರೆಗೆ ಯಾವ್ಯಾವ ತಹಶೀಲ್ದಾರರುಗಳು ಕಾರ್ಯದರ್ಶಿಗಳಾಗಿ ನಮ್ಮ ಸಮಿತಿಯ ಸಭೆಯನ್ನು ಕರೆದಿದ್ದಾರೆ ಎನ್ನುವುದನ್ನು ಶಾಸಕರುಗಳು ಹೇಳಲಿ. ಅವರು ಸಭೆಯನ್ನು ಕರೆದೇ ಇಲ್ಲ. ಏಕೆಂದರೆ ಅವರಿಗೆ ಇನ್ನೂ ಅದರ ಗಂಭೀರತೆಯೇ ಬಂದಿಲ್ಲ. ಜಿಲ್ಲಾಧಿಕಾರಿಗಳಿಗೆ ಅದರ ಗಂಭೀರತೆ ಬಂದಿಲ್ಲ. ಹಾಗಾಗಿ ನಾನು ಈ ವಿಷಯದಲ್ಲಿ ಎಲ್ಲ ಕಡೆಗಳಲ್ಲೂ ಸಭೆಯನ್ನು ಮಾಡಿ, ಈ ಭೀಕರತೆಯನ್ನು ಅವರಿಗೆ ಮನದಟ್ಟು ಮಾಡಿಕೊಟ್ಟು, ಅವರು ತೆಗೆದುಕೊಳ್ಳಬೇಕಾಗಿರುವಂಥ ಕೆಲಸ–ಕಾರ್ಯಗಳ ಬಗ್ಗೆ ವಿಶೇಷವಾದ ಜವಾಬ್ದಾರಿಯನ್ನು ವಹಿಸಬೇಕು. ಅದರಲ್ಲಿ ಮುಖ್ಯವಾಗಿ ಬರುವಂಥಾದ್ದು ಕುಡಿಯುವ ನೀರು. ಕುಡಿಯುವ ನೀರಿಗೆ ಈಗಾಗಲೇ ಎಲ್ಲ ಕಡೆಯೂ ಸಮಸ್ಯೆಗಳು ಶುರುವಾಗುತ್ತಿದೆ. ನಾನು ಬಜೆಟ್ ಮೇಲೆ ಮಾತನಾಡುವಾಗ ಆರ್.ಡಿ.ಪಿ.ಆರ್. ಇಲಾಖೆಯ ವಿಷಯದ ಬಗ್ಗೆ ಮಾತನಾಡುತ್ತೇನೆ. ಅವರು ಬರೀ ಪುಸ್ತಕಗಳ ಕೈಪಿಡಿಯನ್ನು ಅಷ್ಟೇ ಮುದ್ರಿಸಿಕೊಂಡು ಈ ಇಲಾಖೆ ಹೇಗೆ ಪ್ರಗತಿಯನ್ನು ತೋರಿಸುತ್ತಿದೆ ಎನ್ನುವ ಬಗ್ಗೆ ಪ್ರತ್ಯೇಕವಾಗಿ ಮಾತನಾಡಬೇಕಾಗುತ್ತದೆ. ಆರ್.ಡಿ.ಪಿ.ಆರ್. ಇಲಾಖೆಯಲ್ಲಿ ಕುಡಿಯುವ ನೀರಿಗೋಸ್ಕರವಾಗಿ ಮಾಡಿರುವ ಯೋಜನೆಗಳ್ಯಾವುದನ್ನು ಸಹ ಗ್ರಾಮ ಪಂಚಾಯಿತಿಗಳು ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವಂಥ ಪರಿಸ್ಥಿತಿ ಇದೆ. ಏಕೆಂದರೆ, ನಿರ್ವಹಣೆ ಮಾಡುವುದಕ್ಕೆ ಅವರಿಗೆ ಹಣಕಾಸಿನ

ನೆರವು ಇಲ್ಲ. ಅಲ್ಲಿ ಒಂದು ಪೈಪು ಒಡೆದಿದೆ ಎಂದರೆ ಅಥವಾ ಪಂಪು ಸುಟ್ಟಿದೆ ಎಂದರೆ ಅಥವಾ ಇನ್ನೆಲ್ಲೋ ಒಂದು ಕಡೆ ವಿಸ್ತರಣೆ ಮಾಡಬೇಕು ಎಂದರೆ ಅದಕ್ಕೆ ಅವರಿಗೆ ಯಾವುದೇ ರೀತಿಯ ಹಣಕಾಸಿನ ನೆರವು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಇಲ್ಲ. ಹೀಗಾಗಿ ಇವತ್ತು ಪಂಚಾಯಿತಿಗಳು ಸೊರಗಿ ಹೋಗುತ್ತಿರುವುದರಿಂದಾಗಿ, ಬರಗಾಲದ ಪರಿಸ್ಥಿತಿಯಲ್ಲಿ ತಕ್ಷಣ ನಿರ್ವಹಣೆ ಮಾಡಬೇಕಾದ ನೀರು ಸರಬರಾಜು ಯೋಜನೆಗಳು ನಿರ್ವಹಣೆ ಆಗದೇ ಇರುವಂಥ ಸ್ಥಿತಿ ಇದೆ. ಹಾಗಾಗಿ ಅದಕ್ಕೆ ಆದ್ಯತೆ ಮೇಲೆ ಕೊಡಬೇಕು. ಹೊಸ ಬೋರ್‌ವೆಲ್ ಕೊರೆಯುವುದು ಅಥವಾ ಹೊಸ ಬಾವಿ ತೆಗೆಯುವುದು ಮುಂದಿನ ಪ್ರಕ್ರಿಯೆ. ಆದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈಗ ನಿರ್ವಹಣೆ ಆಗಬೇಕಾದಂಥ ಮಿನಿವಾಟರ್ ಸಪ್ಲೈ ಸ್ಕೀಂ ಅಥವಾ ಬೇರೆ ಬೇರೆ ವಾಟರ್ ಸಪ್ಲೈ ಸ್ಕೀಂಗಳೆಲ್ಲವನ್ನೂ ಇಷ್ಟರೊಳಗಾಗಿ ಸುಸಜ್ಜಿತವಾಗಿ ಇಟ್ಟುಕೊಳ್ಳಬೇಕಾಗಿತ್ತು. ಹಾಗೆ ಇಟ್ಟುಕೊಳ್ಳುವುದಕ್ಕೆ ಅವರಿಗೆ ಅವರದೇ ಆದಂಥ ಸಮಸ್ಯೆಗಳಿವೆ. ಒಂದು ಹ್ಯಾಂಡ್ ಪಂಪ್ ರಿಪೇರಿ ಮಾಡಲು 50 ರೂಪಾಯಿ ಕೊಡುತ್ತೇವೆ, 100 ರೂಪಾಯಿ ಕೊಡುತ್ತೇವೆ, ಲಂಪ್‌ಸಮ್ ಅಷ್ಟು ಬರುತ್ತದೆ, ಇಷಉ ಬರುತ್ತದೆ ಎಂದು ಹೇಳುತ್ತಾರೆ. ಯಾರೂ, ಯಾವುದನ್ನೂ ಮಾಡಿಸುವುದಿಲ್ಲ. ಹ್ಯಾಂಡ್ ಪಂಪ್ ರಿಪೇರಿ ಆಯಿತೇ ನಾವು ಸುಮ್ಮನೆ ಪಿ.ಡಿ.ಓ.ಗಳು ಮತ್ತು ಸೆಕ್ರೆಟರಿಗಳನ್ನು ಕೇಳಿಕೊಂಡು ಇರಬೇಕಾದಂಥ ಪರಿಸ್ಥಿತಿ ಇದೆ. ಪಂಚಾಯಿತಿ ಮಟ್ಟದಲ್ಲಿರುವ ಹ್ಯಾಂಡ್ ಪಂಪ್ ಇರಲಿ, ಮಿನಿ ವಾಟರ್ ಸಪ್ಲೈ ಸ್ಕೀಂಗಳಿರಲಿ, ಎಲ್ಲದಕ್ಕೂ ಸಹ ಚಾಲನೆ ಕೊಡಿಸಬೇಕಾದಂಥ ಅಗತ್ಯತೆ ಇದೆ. ಈ ರೀತಿಯ ಸ್ಕೀಂಗಳು ಪಂಚಾಯಿತಿ ಮಟ್ಟದಲ್ಲಿ ಎಷ್ಟಿವೆ, ಅದರಲ್ಲಿ ಎಷ್ಟು ಕೆಲಸ ಮಾಡುತ್ತಿವೆ ಎನ್ನುವ ಎಲ್ಲ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಸರ್ಕಾರ ಹೇಳಲಿ. ಈ ಸ್ಕೀಂಗಳು ಕೆಲಸ ಮಾಡದೇ ಇರುವಂಥ ಸ್ಥಿತಿ ಇದೆ. ಹಾಗಾಗಿ ಕುಡಿಯುವ ನೀರಿಗೆ ದೊಡ್ಡ ಸಮಸ್ಯೆಗಳು ಬರುತ್ತಿವೆ. ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಗೆ ಪಂಚಾಯಿತಿಗಳಿಗೆ ಹೇಗೆ ಜವಾಬ್ದಾರಿ ಇದೆಯೋ, ಅದೇ ರೀತಿ ಶಾಸಕರ ಅಧ್ಯಕ್ಷತೆಯಲ್ಲಿರುವ ಸಮಿತಿಗಳಿಗೂ ಸಹ ಹಣವನ್ನು ಕೊಡಬೇಕಾಗುತ್ತದೆ. ಈಗ ಹಣ ಕೊಟ್ಟರಷ್ಟೇ ಅದರಿಂದ ಬಾವಿ

ತೆಗೆಸಬಹುದು, ಬೋರ್‌ವೆಲ್ ತೆಗೆಸಬಹುದು ಅಥವಾ ಎಕ್ಸ್‌ಟೆನ್‌ಷನ್ ಮಾಡಿಸಬಹುದು ಅಥವಾ ಅಂಥ ತುರ್ತು ಪರಿಸ್ಥಿತಿ ಇದ್ದರೆ ಟ್ಯಾಂಕರ್‌ಗಳ ಮುಖಾಂತರವಾದರೂ ನೀರನ್ನು ಕೊಡಿಸಬಹುದು. ಟ್ಯಾಂಕರ್‌ಗಳಲ್ಲಿ ನೀರು ಕೊಡಿಸಬೇಕಾದಂಥ ಪರಿಸ್ಥಿತಿ ತಕ್ಷಣಕ್ಕೆ ಕೆಲವು ಕಡೆ ಬಂದಿದ್ದರೂ ಸಹ, ಉಳಿದಂತೆ ಅನೇಕ ಕಡೆಗಳಲ್ಲಿ ಏಪ್ರಿಲ್, ಮೇ ತಿಂಗಳಲ್ಲಿ ಅಂಥ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ, ಈಗಲೇ ಅದಕ್ಕೆ ಎಷ್ಟೆಷ್ಟು ಹಣಕಾಸಿನ ನೆರವು, ಇತ್ಯಾದಿಗಳು ಬೇಕು ಎನ್ನುವ ಬಗ್ಗೆ ವರದಿಗಳನ್ನು ತರಿಸಿಕೊಂಡು ನೀರಿಗೆ ಆದ್ಯತೆಯಿಂದ ಎಲ್ಲ ಹಂತಗಳಲ್ಲಿ ಹಣ ಬಿಡುಗಡೆ ಮಾಡಬೇಕು ಎಂದು ನಾನು ಆಗ್ರಹಿಸುತ್ತೇನೆ. ಎರಡನೆಯದಾಗಿ, ದನಕರುಗಳಿಗೆ ಅಗತ್ಯವಿರುವ ನೀರು ಮತ್ತು ಮೇವು. ಮೇವಿನ ವಿಷಯದಲ್ಲಿ, ಮೇವನ್ನು ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಕಳುಹಿಸದೇ ಇರುವಂಥ ನಿರ್ಬಂಧವನ್ನು ಈಗಲೇ ಹಾಕಬೇಕು. ಮತ್ತು ನಾವು ಮೇವನ್ನು ಎಲ್ಲೆಲ್ಲಿಂದ ರಾಜ್ಯಕ್ಕೆ ತರಿಸಿ ಸಂಗ್ರಹ ಮಾಡಿಕೊಳ್ಳಬಹುದು ಎನ್ನುವುದನ್ನು ನೋಡಬೇಕು. ಇದು ಕೇವಲ ಕಂದಾಯ ಇಲಾಖೆಯ ಜವಾಬ್ದಾರಿ ಮಾತ್ರವಲ್ಲ. ಎಲ್ಲ ಇಲಾಖೆಗಳ ಸಮನ್ವಯತೆಯಿಂದ ಇಂಥ ಪರಿಸ್ಥಿತಿಯನ್ನು ಎದುರಿಸಬೇಕು. ಪಶುಸಂಗೋಪನಾ ಇಲಾಖೆಯವರು ಈ ಜವಬ್ದಾರಿಯನ್ನು ನಿರ್ವಹಿಸಲಿಲ್ಲ ಎಂದರೆ ಮೇವಿನ ಸಂಗ್ರಹವನ್ನು ನಾವು ಯಾವ ಯಾವ ರಾಜ್ಯದಿಂದ ಮಾಡಿಕೊಳ್ಳಬಹುದು ಎನ್ನುವುದನ್ನು ಯೋಜನೆ ಮಾಡಲಿಲ್ಲವೆಂದರೆ, ಇನ್ನೊಂದು ತಿಂಗಳಾದ ಮೇಲೆ ಮೇವಿಗೆ ಆರ್ಡರ್ ಕೊಡುತ್ತೇವೆ ಎಂದರೆ ಆಗ ಅವರೂ ಸಹ ಬೇರೆ ಬೇರೆ ರಾಜ್ಯಗಳಿಗೆ ಸಪ್ಲೈ ಮಾಡಿರುತ್ತಾರೆ, ಅದು ನಮ್ಮ ರಾಜ್ಯಕ್ಕೆ ಸಿಗುವುದಿಲ್ಲ, ಸಿಕ್ಕಿದರೂ ಒಂದಕ್ಕೆ ನಾಲ್ಕರಷ್ಟು ರೇಟ್ ಕೊಡಬೇಕಾಗುತ್ತದೆ. ಟ್ರಾನ್ಸ್‌ಪೋರ್ಟೇಷನ್ ಪ್ರಾಬ್ಲಂ ಆಗುತ್ತದೆ, ನಂತರ ಮಳೆ ಬರುತ್ತದೆ, ಆಗ ಇಲ್ಲಿಗೆ ಮೇವು ಬರುತ್ತದೆ. ಆಗ ಅದರಲ್ಲೇನೂ ಅರ್ಥವಿರುವುದಿಲ್ಲ. ಮೇವನ್ನು ಸಂಗ್ರಹಣೆ ಮಾಡುವ ಬಗ್ಗೆ ಈಗಲೇ ಅದಕ್ಕೆ ಬೇಕಾದಂತಹ ಯೋಜನೆಗಳನ್ನು ಮಾಡಿಕೊಳ್ಳಬೇಕು.ಅದಕ್ಕಾಗಿ ಬೇರೆ ಬೇರೆ ರಾಜ್ಯದವರ ಜೊತೆಯಲ್ಲಿ ಸಂಪರ್ಕ ಮಾಡಬೇಕು. ನಮ್ಮ ರಾಜ್ಯದಿಂದ

ಹೊರರಾಜ್ಯಗಳಿಗೂ ಮೇವು ಹೋಗಬಾರದು. ಅದಕ್ಕೂ ಸಹ ಈಗಲೇ ಅಡೆತಡೆಗಳನ್ನು ಹಾಕಬೇಕು. ನಮ್ಮಲ್ಲಿ ಎಲ್ಲಾ ವ್ಯವಸ್ಥೆಗಳು ಇದೆ. ಆ ವ್ಯವಸ್ಥೆಗಳಿಗೆ ಒಂದು ಚಾಲನೆಯನ್ನು ಕೊಡಬೇಕಾಗಿದೆಯಲ್ಲಾ, ಅದನ್ನು ಅನುಷ್ಠಾನಕ್ಕೆ ತರುವಂತಹದ್ದನ್ನೂ ಸಹ ನೋಡಬೇಕಾಗಿದೆ. ಈ ಬಗ್ಗೆ ಸರ್ಕಾರವು ನಿರ್ಲಕ್ಷಿಸುತ್ತಿದೆ. ಅದರ ಬಗ್ಗೆ ಸರ್ಕಾರವು ಆದ್ಯತೆಯನ್ನು ಕೊಡಬೇಕಾಗಿದೆ. ಆ ವಿಷಯದಲ್ಲಿ ನೋಡಬೇಕಾಗಿದೆ. ಇವರು ದನಕರುಗಳಿಗೆ ಎಷ್ಟು ಗೋಶಾಲೆಗಳನ್ನು ತೆರೆದಿದ್ದಾರೆಂದು ಹೇಳಲಿ ನೋಡೋಣ. ದನಕರುಗಳನ್ನು ಕಸಾಯಿಖಾನೆಗಳಿಗೆ ಸಾಗಿಸುತ್ತಿರುವುದನ್ನು ನಾವು ದಿನಬೆಳಗಾದರೆ ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಆದರೆ ದನಕರುಗಳಿಗೆ ಗೋಶಾಲೆಗಳಿಗೆ ಕಳುಹಿಸಬೇಕೆನ್ನುವುದು ಜನರಲ್ಲಿ ಬರಬೇಕಾದರೆ ಗೋಶಾಲೆಗಳನ್ನು ತೆರೆಯಬೇಕಾಗುತ್ತದೆ. ಗೋಶಾಲೆಗಳನ್ನು ತೆರೆದು ಅಲ್ಲಿ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರೆ ಅಲ್ಲಿಗೆ ಜನರು ಗೋವುಗಳನ್ನು ಕಳುಹಿಸುವುದಕ್ಕೆ ಇಷ್ಟಪಡುತ್ತಾರೆ. ಗೋಶಾಲೆಗಳನ್ನು ತೆರೆಯದೆ ಹೋದರೆ ರೈತರು ಏನು ಮಾಡುತ್ತಾರೆಂದರೆ ಕಸಾಯಿಖಾನೆಗಳಿಗೆ ಕಳುಹಿಸುವಂತಹ ದುಸ್ಥಿತಿ ಬರುತ್ತದೆ. ಅದು ಆ ರೀತಿಯಾಗಿ ಆಗಬಾರದು. ರೈತರುಗಳು ಇವತ್ತಿನ ದಿವಸ ಕಷ್ಟದಲ್ಲಿರಬಹುದು ನಾಳೆ ದಿವಸ ಆ ಕಷ್ಟ ದೂರವಾದ ನಂತರ ಆ ಗೋವುಗಳನ್ನು ಅಥವಾ ಎತ್ತುಗಳನ್ನು, ಹಸುಗಳನ್ನು ನಂತರ ಕರೆದುಕೊಂಡು ಹೋಗಿ ಸಾಕುತ್ತಾರೆ. ಹಾಗಾಗಿ ತಕ್ಷಣ ಗೋಶಾಲೆಗಳನ್ನು ತೆರೆಯುವಂತಹ ಯೋಜನೆಯನ್ನು ಮಾಡಬೇಕಾಗಿದೆ. ಈ ರೀತಿಯಾಗಿ ಕೂಲಂಕುಷವಾಗಿ ಸರ್ಕಾರವು ಒಂದೊಂದು ವಿಷಯದಲ್ಲಿರುವ ಸಹ ಜವಾಬ್ದಾರಿಯಿಂದ ಕೆಲಸವನ್ನು ಮಾಡಬೇಕಾಗಿದೆ. ಇನ್ನೊಂದು ಮುಖ್ಯವಾಗಿ ಹೇಳುವುದಾದರೆ ಜನರು ಗುಳೆ ಹೋಗುತ್ತಿದ್ದಾರೆ. ಉದ್ಯೋಗ ಸೃಷ್ಟಿ ಇಲ್ಲಿ ಆಗದೆ ಇರುವುದರಿಂದಾಗಿ ಗುಳೆ ಹೋಗುತ್ತಿರುವುದನ್ನು ನಾವು ಪ್ರತಿ ವರ್ಷವು ನೋಡುತ್ತಿದ್ದೇವೆ. ಯಾವ ಯಾವ ಪ್ರದೇಶದಿಂದ ಯಾವ ಯಾವ ಜಿಲ್ಲೆಯಿಂದ ಉದ್ಯೋಗಕ್ಕಾಗಿ ಜನರು ಗುಳೆ ಹೋಗುತ್ತಿರುವುದು ನಮಗೆ ಗೊತ್ತಿದೆ. ಆ ಪ್ರದೇಶದಲ್ಲಿ ಉದ್ಯೋಗ ಖಾತ್ರಿ ಯೋಜನೆಯಿಂದ ಅಥವಾ

ಸರ್ಕಾರದ ಬೇರೆ ಬೇರೆ ಯೋಜನೆಗಳಿಂದ ನಾವು ಉದ್ಯೋಗ ಸೃಷ್ಟಿಯಾಗುವಂತಹ ಕೆಲಸ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಹ ಅಗತ್ಯತೆ ಇದೆ. ಕನಿಷ್ಠ ಪಕ್ಷ ಈ ರೀತಿಯಾಗಿ ಹತ್ತಾರು ವಿಷಯಗಳ ಬಗ್ಗೆ ಸರ್ಕಾರವು ಗಂಭೀರವಾದಂತಹ ಸಂದೇಶವನ್ನು ರಾಜ್ಯಮಟ್ಟದಲ್ಲಿ ಕೊಡದೆ ಇರುವ ಪರಿಣಾಮವಾಗಿ ಈ ಬಗ್ಗೆ ನಾವು ಇವತ್ತು ಬರಗಾಲ ಎದುರಾಗಿರುವುದರಿಂದ ಜನರು ಹೇಗೆ ಕಷ್ಟಪಡುತ್ತಿದ್ದಾರೆಂದು ಎಲ್ಲಾ ಮಾಧ್ಯಮಗಳಲ್ಲಿ ನೋಡಬಹುದು. ರೈತರು ಬೆಳೆದಂತಹ ಬೆಳೆಯು ಕೈಗೆ ಬಾರದೆ ಹಾಳಾಯಿತು, ಅನೇಕ ಕಡೆಗಳಲ್ಲಿ ಹಿಂಗಾರು ಮತ್ತು ಮುಂಗಾರು ಬೆಳೆಯೂ ಸಹ ಬರಲಿಲ್ಲ ಇದರಿಂದಾಗಿ ಪರಿಸ್ಥಿತಿ ಏನಾಗಿದೆ ಎಂದರೆ ಬೆಳೆಗಳು ಕೈಗೆ ಬಾರದೆ ಇರುವುದನ್ನು ನಾವು ನೋಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಸರ್ಕಾರವು ತಕ್ಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆಯನ್ನು ಮಾಡಿ ಒಂದು ಸ್ಪಷ್ಟವಾದಂತಹ ಸಂದೇಶವನ್ನು ಕಳುಹಿಸಿ ಅಲ್ಲಿಯ ಜನರು ಗುಳೆ ಹೋಗುತ್ತಿರುವುದನ್ನು ತಪ್ಪಿಸಿ ಅಲ್ಲಿಯೇ ಸ್ವತ: ಉದ್ಯೋಗವನ್ನು ಸೃಷ್ಟಿ ಮಾಡಿ ಅಲ್ಲಿಯೇ ಉದ್ಯೋಗ ಮಾಡುವಂತೆ ನೋಡಿಕೊಳ್ಳಬೇಕು. ಆ ಉದ್ಯೋಗಖಾತ್ರಿ ಯೋಜನೆಯನ್ನು ನಂಬಿ ಉದ್ಯೋಗ ಕೊಡುತ್ತೇವೆಂದು ಹೇಳುವುದನ್ನು ಸರ್ಕಾರವು ಕೈಬಿಡಬೇಕು. ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಯಾವ ಯಾವ ನಿಯಮಾವಳಿಗಳು ಇದೆಯೋ ಅದರ ಪ್ರಕಾರವಾಗಿ ಎಷ್ಟು ಉದ್ಯೋಗ ಸಿಗುತ್ತದೆಯೋ ಅದನ್ನು ಪ್ರತ್ಯೇಕವಾದಂತಹ ರೀತಿಯಲ್ಲಿ ನಾವು ಚರ್ಚಿಸಿ ನೋಡಬೇಕಾಗಿದೆ. ಈ ಉದ್ಯೋಗ ಖಾತ್ರಿ ಯೋಜನೆಯು ಇದು ಕನ್ನಡಿಯಲ್ಲಿರುವಂತಹ ಹಣದ ಗಂಟಾಗಿದೆಯೇ ಹೊರತು ಅದು ಜನರಿಗೆ ಸಿಗುವಂತಹ ಅಥವಾ ಅವರಿಗೆ ಅಭಿವೃದ್ಧಿ ಕೆಲಸ ಸಿಗುವಂತಹ ರೀತಿಯಲ್ಲಿ ಅದು ಆಗುತ್ತಿಲ್ಲ. ರಾಜ್ಯ ಸರ್ಕಾರವೂ ಸಹ ಇಂತಹ ಸಂದರ್ಭದಲ್ಲಿ ಹೆಚ್ಚಿನ ಹಣಕಾಸಿನ ನೆರವನ್ನು ಕೊಟ್ಟು ಉದ್ಯೋಗ ಸೃಷ್ಟಿ ಮಾಡುವಂತಹ ಪರಿಸ್ಥಿತಿ ನಿರ್ಮಿಸಬೇಕು. ಈ ರೀತಿಯಾದಾಗ ಮಾತ್ರ ಜನರು ಗುಳೆ ಹೋಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ, ಇಲ್ಲವೆಂದರೆ ಅನೇಕ ಜಿಲ್ಲೆಗಳಲ್ಲಿ, ಬೇರೆ ಬೇರೆ ರಾಜ್ಯಗಳಿಗೆ ಜನರು ವಲಸೆ ಹೋಗಿ ಅಲ್ಲಿ ತಮ್ಮ ಜೀವನವನ್ನು ನಡೆಸುವಂತಹ ಸ್ಥಿತಿಯನ್ನು ನಾವು

ಕಾಣುತ್ತಿದ್ದೇವೆ. ಹಾಗಾಗಿ ಈ ರೀತಿಯಾದಂತಹ ಅನೇಕ ಹಲವು ಸಮಸ್ಯೆಗಳು ಇವೆ. ಈ ಸಮಸ್ಯೆಗಳ ಬಗ್ಗೆ ರಾಜ್ಯದಿಂದ ಸಂದೇಶವನ್ನು ಕಳುಹಿಸಬೇಕೆಂದು ಹೇಳುತ್ತಾ ಕೊನೆಯಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಬಲವಾಗಿ ಮನವಿಯನ್ನು ಮಾಡಿಕೊಳ್ಳಬೇಕು. ಒಂದು ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆಂದು ನಾವು ಕೇಳಿದರೆ ಹೇಳುತ್ತಾರೆ. ಇದು ಯಾವ ಕಾಲದಲ್ಲಿ ಕಳುಹಿಸಿರುವಂತಹ ಪ್ರಸ್ತಾವನೆ. ಈಗ ಹೊಸದಾಗಿ estimate ಮಾಡಿ ಅಂದಾಜಿಸಿ ಯಾವ ಯಾವ ಇಲಾಖೆಯಲ್ಲಿ ಏನೇನು ಅಗತ್ಯತೆ ಇದೆ, ಏನೆಲ್ಲಾ ತೊಂದರೆ ತೊಡಕುಗಳು ಆಗಿದೆ ಎನ್ನುವುದನ್ನು ಸರ್ಕಾರವು ಈ ಬಗ್ಗೆ ಹೊಸದಾಗಿ ಮನವಿ ಪತ್ರವನ್ನು ಕೇಂದ್ರಕ್ಕೆ ಸಲ್ಲಿಸಬೇಕಾದಂತಹ ಅಗತ್ಯತೆ ಇದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಇವರು ಹೇಳಿರುವ ಪ್ರಕಾರ 1014 ಕೋಟಿ ರೂಪಾಯಿಗಳು ನಾವು ಬರ ನೆರವಿಗಾಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಕೇಳಿದ್ದೇವೆ ಎನ್ನುವಂತಹ ವರದಿ ಇದೆ. ಆದರೆ ಇದು ವಸ್ತು ಸ್ಥಿತಿಯಲ್ಲ. ಇದು ಬಹಳ ಹಿಂದಿನದು ಆಗಿದೆ.

ಅಧ್ಯಕ್ಷರು: ಮಾನ್ಯ ಕಾಗೇರಿಯವರು, ಈ ಬಗ್ಗೆ ಬೇರೆಯವರು ಸಹ ಮಾತನಾಡುವವರು ಇದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಬೇಗನೆ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ತಾವು ಬೇಗನೆ ಮುಗಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾವು ಬರುತ್ತೀರೆಂದು ಗೊತ್ತಾದ ತಕ್ಷಣವೇ ನಾನು ನನ್ನ ಮಾತನ್ನು ಬೇಗನೆ ಮುಗಿಸಬೇಕೆಂದು ಅಂದುಕೊಂಡಿದ್ದೇನೆ. ಅದಕ್ಕೇನು ಹೊಸದೇನೂ ಭಾವನೆ ಬಂದಿಲ್ಲ. ಕೇಂದ್ರ ಸರ್ಕಾರಕ್ಕೆ ಬರಗಾಲ ಪ್ರದೇಶಕ್ಕೆ 1014 ಕೋಟಿ ರೂಪಾಯಿಗಳು ಸಾಕೆಂದು ಹೇಳಿದ್ದಾರೆ, ಇದು ಸರಿಯಲ್ಲ, ಇದು ಯಾವತ್ತಿನದೋ ಅಂದಾಜಾಗಿದೆ, ಹಾಗಾಗಿ ಪ್ರಸ್ತುತ ಎಷ್ಟು ಕೋಟಿ ರೂಪಾಯಿಗಳು ಬೇಕಾಗಿದೆ?

ಅಧ್ಯಕ್ಷರು: 10,000 ಕೋಟಿ ರೂಪಾಯಿಗಳು ಬೇಕಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಎಷ್ಟು ಕೋಟಿ ರೂಪಾಯಿಗಳು ಬೇಕೆಂದು ನಾನು ಹೇಗೆ ಅಂದಾಜಿಸಿ ಹೇಳುವುದು?

ಅಧ್ಯಕ್ಷರು: ಈಗ ನೀವು ಏನು ಮಾಡಬೇಕೆಂದರೆ ಬರಗಾಲ ಬಂದಿರುವುದರಿಂದ ಏನಾಗಿದೆ ಎಂಬುದರ ಬಗ್ಗೆ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆ ಬಗ್ಗೆ ನಾನು ಈಗಾಗಲೇ ಹೇಳಿ ಆಗಿದೆ.

ಅಧ್ಯಕ್ಷರು: ತಾವು ಹೇಳುತ್ತಿರುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಸರ್ಕಾರ ಮಾಡಬೇಕಾಗಿರುವುದನ್ನು ಮಾಡಲಿ. ಈಗ ಬರಗಾಲ ಬಂದಿರುವುದರಿಂದಾಗಿ ಎಷ್ಟು ಹಾನಿಯಾಗಿದೆ ಎಂಬುದರ ಬಗ್ಗೆ ಸಮೀಕ್ಷೆಯನ್ನು ಮಾಡಿ ತಕ್ಷಣ ಕೇಂದ್ರ ಸರ್ಕಾರದಿಂದ ಹಣವನ್ನು ತರಬೇಕಾಗಿದೆ. ನಾನು ಏತಕ್ಕಾಗಿ ಆಗ್ರಹದಿಂದ ಹೇಳುತ್ತಿದ್ದೇನೆಂದರೆ ಮಾನ್ಯ ಅಧ್ಯಕ್ಷರೆ, ಲೋಕಸಭಾ ಚುನಾವಣೆ ಬರುತ್ತಿರುವುದರಿಂದಾಗಿ Code of Conduct ಬರುತ್ತದೆ. ಆಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಏನೂ ಮಾಡುವ ಹಾಗಿಲ್ಲ, ಆಮೇಲೆ ಪರಿಸ್ಥಿತಿಯು ಗಂಭೀರವಾಗುತ್ತದೆ. Code of Conduct ಬಂದಿದೆ ಎಂದು ಎಲ್ಲರೂ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಹೋದರೆ ಜನರು ಆಮೇಲೆ ಏನು

ಮಾಡಬೇಕು? ಜನರು ಬರಗಾಲ ಬಂದಿರುವಂತಹ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು? ಜನರಲ್ಲಿ ಆತ್ಮವಿಶ್ವಾಸವನ್ನು ಕೊಡುವಂತಹ ಅವರಿಗೆ ನೈತಿಕ ಶಕ್ತಿಯನ್ನು ಕೊಡುವಂತಹ ಪ್ರಯತ್ನವು ಸರ್ಕಾರದ ಕಡೆಯಿಂದ ಆಗಬೇಕಾಗಿದೆ. ಈ ಬಗ್ಗೆ ಸರ್ಕಾರದ ಕಡೆಯಿಂದ ಸಂದೇಶ ಹೋಗಬೇಕಾಗಿದೆ. ಹಾಗಾಗಿ ತಕ್ಷಣದಲ್ಲಿ ಈ ಅಧಿವೇಶನವು ನಡೆಯುತ್ತಿದ್ದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ರಾಜ್ಯಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ತರುವುದಕ್ಕೆ ಬೇಕಾದಂತಹ ನಿಯೋಗವನ್ನು ತೆಗೆದುಕೊಂಡು ಹೋಗಲಿ ಅಥವಾ ಅವರು ಹೋಗಿ ಭೇಟಿ ಮಾಡಲಿ. ನಮಗೆ ಹೆಚ್ಚಿನ ಹಣಕಾಸಿನ ನೆರವು ಬರಬೇಕಾಗಿದೆ.

ಅಧ್ಯಕ್ಷರು: ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದು ಇಲ್ಲವೆಂದರೆ ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಕಷ್ಟವಾಗುತ್ತದೆ. ನಾನು ಕೊನೆಯದಾಗಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ದೀರ್ಘಕಾಲಿಕ ಯೋಜನೆಗಳು ಬೇಕಾಗಿದೆ.

ಅಧ್ಯಕ್ಷರು: ಈ ಬಗ್ಗೆ ತಾವು ಬಜೆಟ್ ಮೇಲಿನ ಚರ್ಚೆಯನ್ನು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರ ಜೊತೆಯಲ್ಲಿ ಸರ್ಕಾರವು ತಕ್ಷಣ ಏನೇನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ಇವತ್ತಿನ ತನಕ ಲಕ್ಷಣ ನೋಡಿದರೆ ಸರ್ಕಾರವು ಸಮರ್ಥವಾಗಿ ಬರಗಾಲದ ಪರಿಸ್ಥಿತಿಯನ್ನು ಎದುರಿಸುವ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸುವಂತಹ ಸ್ಥಿತಿಯಲ್ಲಿಲ್ಲ. ಆಡಳಿತದಲ್ಲಿರುವವರು ನಿದ್ರಾವಸ್ಥೆಯಲ್ಲಿದ್ದಾರೆನ್ನುವಂತಹ ಒಂದು ಸಂದೇಶ ರಾಜ್ಯದ ಜನತೆಗೆ ಇದೆ, ಅಧಿಕಾರಿ ವರ್ಗಕ್ಕೆ ಇದೆ. ಹಾಗಾಗಿ ಅವರೂ ಸಹ ಪೂರಾ ನಿದ್ರೆಯಲ್ಲಿರುತ್ತಾರೆ. ಇವರು ನಿದ್ರಾವಸ್ಥೆಯಲ್ಲಿರುವಂತಹ ಸಂದೇಶ ಇದ್ದರೆ ಅವರು ಇನ್ನು ದೀರ್ಘಕಾಲಿಕ ನಿದ್ರೆಯಲ್ಲಿರುವಂತಹ ಸ್ಥಿತಿ ಇರುತ್ತದೆ.

ಹಗಾಗಿ ಸರ್ಕಾರವು ಆಗಾಗ್ಗೆ ಸಭೆಗಳನ್ನು ಮಾಡಿ ಸ್ಪಷ್ಟವಾದಂತಹ ನಿರ್ದೇಶನಗಳನ್ನು ಸಂದೇಶಗಳನ್ನು ಕೊಡಬೇಕು.

ಅಧ್ಯಕ್ಷರು: ಆಯಿತು. ತಾವು ಈಗಾಗಲೇ ಈ ಬಗ್ಗೆ ಹೇಳಿದ್ದೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಿಲ್ಲವೆಂದರೆ ರಾಜ್ಯದ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತೀರಿ. ಈ ರೀತಿಯಾಗಿ ನಾನು ಸರ್ಕಾರವನ್ನು ಆಗ್ರಹಿಸುತ್ತಿದ್ದೇನೆ.

ಅಧ್ಯಕ್ಷರು: O.K. ಮಾನ್ಯ ಚಲುವರಾಯಸ್ವಾಮಿಯವರೆ, ತಾವು ಮಾತನಾಡಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ಮತ್ತು ಬರಗಾಲವು ಪ್ರಾರಂಭವಾಗಿ ಕನಿಷ್ಠ 5–6 ತಿಂಗಳ ಮೇಲಾಗಿದೆ. ಸರ್ಕಾರವು ಯಾವುದಕ್ಕೆ ಹೆಚ್ಚಿನ ಆದ್ಯತೆಯನ್ನು ತೆಗೆದುಕೊಳ್ಳದಿದ್ದರೂ ಕುಡಿಯುವ ನೀರು, ದನಕರುಗಳಿಗೆ ಮೇವು, ಇಂತಹ ವಿಚಾರಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತಾರೆಂಬ ಭಾವನೆಯನ್ನು ಇಟ್ಟುಕೊಂಡಿದ್ದೆವು. ಬರಗಾಲ ಬಂದಿರುವ ಬಗ್ಗೆ ಒಂದು ತಾಲ್ಲೂಕಿನ ಪಟ್ಟಿಯನ್ನು announce ಮಾಡಿದರು. ಕೊನೆಯಲ್ಲಿ ಇನ್ನೊಂದು ಪಟ್ಟಿಯನ್ನೂ ಸಹ announce ಮಾಡಿದರು. ನಾನು ಈಗ ಜಿಲ್ಲಾಧಿಕಾರಿಗಳಿಂದ ಪಟ್ಟಿಯನ್ನು ತರಿಸಿದ್ದೇನೆ. ಮೊದಲನೆಯ ಕಂತಿನಲ್ಲಿ ಘೋಷಣೆ ಮಾಡಿರುವಂತಹ ತಾಲ್ಲೂಕುಗಳಿಗೆ 10–10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎರಡನೇ ಕಂತಿನಲ್ಲಿ ಘೋಷಣೆ ಮಾಡಿರುವಂತಹ ತಾಲ್ಲೂಕುಗಳಿಗೆ ಒಂದು ರೂಪಾಯಿಯನ್ನು ಸಹ ಬಿಡುಗಡೆ ಮಾಡಿರುವುದಿಲ್ಲ. ಈ ಬಗ್ಗೆ ಮಾನ್ಯ ಅಧ್ಯಕ್ಷರು ತಮ್ಮ ಕೂಗಿನಿಂದ ನಿಮ್ಮ ಆದೇಶ ಬಹುಶಃ ಸರ್ಕಾರಕ್ಕೆ ಚುರುಕು ಮುಟ್ಟುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ನಾನು ನಿಮ್ಮಲ್ಲಿ ಕೈಮುಗಿದು ವಿನಂತಿ ಮಾಡಬೇಕಾಗಿದೆ. ಸರ್ಕಾರವು ಏಕೋ ಬಹಳ ಉದಾಸೀನದ ಮನೋಭಾವ ತಾಳುತ್ತಿದೆ. ಸರ್ಕಾರವು ಅಧಿಕಾರಕ್ಕೆ ಬಂದು ವರ್ಷ ಮುಗಿಸಿ ಎರಡನೇ ಬಜೆಟ್ ಅನ್ನು ಕೊಟ್ಟರೂ ಇಂತಹ ಒಂದು ಸಮಸ್ಯೆಯಲ್ಲಿ

ಕುಡಿಯುವ ನೀರಿಗೆ ಇವತ್ತಿನ ದಿವಸ ಪ್ರತಿ ಹಳ್ಳಿಯಲ್ಲಿ ನೀವೂ ಸಹ ನಮ್ಮ ತರಹವೇ ಮಂತ್ರಿಗಳು ಶಾಸಕರಾಗಿಯೇ ಮಂತ್ರಿಗಳಾಗಿರುವುದು. ಬಹುಶಃ ಅವರುಗಳಿಗೆ ಈ ಸಮಸ್ಯೆ ಇಲ್ಲವೇ ಎಂದು ನನಗೆ ಆಶ್ಚರ್ಯವಾಗುತ್ತದೆ. ನಮ್ಮ ಬಯಲು ಸೀಮೆಯಲ್ಲಿ ಒಂದು ಬೋರ್‌ವೆಲ್ ಅನ್ನು ಕೊರೆದರೆ ಒಂದು ವಾರದಲ್ಲಿ ಆ ಬೋರ್‌ವೆಲ್ ನಲ್ಲಿ ನೀರು ಇಲ್ಲದೆ ಅದು drop ಆಗುತ್ತಿದೆ. ಯಾವುದೇ Major Water Supply, Mini Water Supply Scheme ಗಳಲ್ಲಿ ನೀರು drop ಆಗುತ್ತಿದೆ. ಇವತ್ತು ತಕ್ಷಣ ಆ ಬಗ್ಗೆ alternate ಆಗಿ Borewell ಅನ್ನು ಕೊರೆಸಬೇಕಾಗುತ್ತದೆ. CRFನಲ್ಲಿ ಕಳೆದ 5–6 ತಿಂಗಳಿನಲ್ಲಿ ಬಂದಿರುವಂತಹ ಹಣ ಬಿಟ್ಟರೆ ಇದುವರೆಗೂ ಆಡಳಿತದ ವ್ಯವಸ್ಥೆಯಲ್ಲಿ ಅದಕ್ಕೆ ಮತ್ತೆ ಹೆಚ್ಚಿನ ಹಣವನ್ನು ಕೊಡುವಂತಹದ್ದು ತಕ್ಷಣ ಅದಕ್ಕೆ Taskforce ಮೂಲಕ regulation ಮಾಡಿ ಕ್ರಮ ತೆಗೆದುಕೊಳ್ಳವುದು ಇದ್ಯಾವ ಪ್ರಕ್ರಿಯೆಗಳು ಆಗುತ್ತಿಲ್ಲ. ಪ್ರಕೃತಿಯು ನಮ್ಮನ್ನು ಕೇಳಿ ಸಮಸ್ಯೆ ಬರುವುದಿಲ್ಲ. ಹಿಂದೆಯೂ ಸಹ ಇಂತಹ ಹತ್ತಾರು ನಿದರ್ಶನಗಳು ಇವೆ. ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳಿದ ಹಾಗೆ ಇದೇನು first ಅಲ್ಲ, ಕೊನೆಯೂ ಅಲ್ಲ. ಈ ತರಹದ ಸಮಸ್ಯೆಯು ನಮಗೆ ಎಲ್ಲಾ ಸರ್ಕಾರವು ಸಹ ಇದನ್ನು ಎದುರಿಸುವಂತಹದ್ದು ಸಹಜವಾದುದು. ನಾವು ಇಂತಹ timeನಲ್ಲಿ ಎಷ್ಟು ಎಚ್ಚೆತ್ತುಕೊಂಡು ಕೆಲಸವನ್ನು ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ ಎನ್ನುವುದು ಇರಬೇಕಾಗಿದೆ. ಬಹುಶಃ ಇರುವಂತಹ ಸಚಿವರು ಮತ್ತು ಸರ್ಕಾರ ಇಷ್ಟೊಂದು ಉದಾಸೀನ ಮಾಡುತ್ತಿರುವುದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ನಾನು ವಿಸ್ತೀರ್ಣವಾಗಿ ಹೇಳುವುದಾದದರೆ ಇವತ್ತಿನ ದಿವಸ irrigationನಲ್ಲಿ ನೀರನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದರೆ ಕೆರೆಗಳು ತುಂಬಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಮತ್ತು ವಿ.ಸಿ. ಅಚ್ಚು ಕಟ್ಟು ಕೊನೆಯ ಭಾಗಗಳಲ್ಲಿ ನಮ್ಮ ನಾಗಮಂಗಲ, ಮದ್ದೂರು, ಮಳವಳ್ಳಿಗೆ ಕನಿಷ್ಠ ನೀರು ತುಂಬಿಸುವುದಕ್ಕೂ ಸಹಾ ಆಗಲಿಲ್ಲ. ಮದ್ದೂರು, ಮಂಡ್ಯ ಕೆಲವು ಭಾಗಗಳ ಕೆರೆಗಳಿಗೆ ನೀರು ತುಂಬಿಸಲಾಗಲಿಲ್ಲ. ನೀವೇನಾದರೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು

ನೀರಾವರಿಯ ಯೋಜನೆಗಳ ಮೂಲಕ ಕೆರೆಗಳಿಗೆ ನೀರು ತುಂಬಿಸಿದ್ದರೆ ನಿಮಗೆ ಇವತ್ತು ಈ ಸಮಸ್ಯೆ ಎದುರಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ Assembly ನಡೆದಾಗ ನಡೆದಾಗ ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ICC meeting ನಡೆದಾಗ ಗಮನಕ್ಕೆ ತಂದಿದ್ದೇವೆ. ನಿಮ್ಮ ಅಧಿಕಾರಗಳಾಗಲಿ, ಆ ಜಿಲ್ಲೆಯ ಉಸ್ತುವಾರಿ ಅಧಿಕಾರಿಗಳಾಗಲಿ, ಕಾರ್ಯದರ್ಶಿಗಳಾಗಲಿ, ಸಚಿವರಾಗಲಿ, ಇಲಾಖಾ ಸಚಿವರಾಗಲಿ ಅದರ ಬಗ್ಗೆ ಗಮನ ಹರಿಸಲಿಲ್ಲ. ಇವತ್ತು ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಜಯಚಂದ್ರರವರು ಹೇಮಾವತಿ ಅಚ್ಚುಕಟ್ಟಿಗೆ ಸಂಬಂಧಿಸಿದಂತೆ ಅನೇಕ ಬಾರಿ ಮೀಟಿಂಗ್ ಮಾಡಿದ್ದಾರೆ. ಎಲ್ಲಾ ಅಚ್ಚುಕಟ್ಟಿನ ಕೆರೆಗಳಿಗೆ ನೀರು ತುಂಬಿಸಿದ್ದರೆ ಇವತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬೇಕಾದ ಅವಶ್ಯಕತೆ ಇರಲಿಲ್ಲ. ಲಕ್ಷಾಂತರ TMC ನೀರು ತಮಿಳುನಾಡಿಗೆ ಅವರು ಬೇಡವೆಂದರೂ ಹರಿದುಹೋಯಿತು. ಅವತ್ತು ತೆಗೆದುಕೊಂಡಂಥ ಉದಾಸೀನದಿಂದ ಇವತ್ತು ರಾಜ್ಯದ ಜನರು ಯಾವ ರೀತಿ ಪೆಟ್ಟು, ನೋವು ಅನುಭವಿಸುತ್ತಿದ್ದಾರೆ ನೋಡಿ. ಬಹುಶಃ Assembly ಮುಗಿದ ಮುಗಿದ ತಕ್ಷಣ ಏನಾದರೂ code of conduct ಈ ತಿಂಗಳ ಕೊನೆಯಲ್ಲೋ, ಮುಂದಿನ ತಿಂಗಳ ಮೊದಲಲ್ಲಿ ಬಂದರೆ ನಾವೆಲ್ಲರೂ ಸಹ ನಮ್ಮದೇ ಆದ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇವೆ. ಜನರ ರಕ್ಷಣೆಗೆ ಹೋಗುವವರ್ಯಾರು? ಅಧಿಕಾರಿಗಳಿಗೆ ಯಾರಿಗೆ ಫೋನ್ ಮಾಡಿದರೂ ನಾವು ಚುನಾವಣೆಗೆ engage ಆಗಿದ್ದೇವೆ, ಸರ್, ಅದರಲ್ಲಿ ಮೀಟಿಂಗ್ ಕರೆದಿದ್ದಾರೆ, ಸರ್ ಎಂದು ಹೇಳುತ್ತಾರೆ. ಅವತ್ತು ಯಾರಿಗೆ ಹೇಳುವುದು? ಈ ಪರಿಸ್ಥಿತಿ ಇದೆ. ನೀವೇನಾದರೂ Assembly ನಡೆಯುವ ವೇಳೆಯಲ್ಲೇ ಕನಿಷ್ಠ RDPR ಮತ್ತು ಜಿಲ್ಲಾಧಿಕಾರಿಗಳು ಒಂದೊಂದು ತಾಲ್ಲೂಕಿಗೆ ಇಷ್ಟು ಎಂದು ಕೊಡಬೇಕು. CRF ನಲ್ಲಿ ಎಷ್ಟಿದೆಯೋ ಗೊತ್ತಿಲ್ಲ, ರಾಜ್ಯದ ಬೊಕ್ಕಸದಿಂದ ಕೊಡಿ. ನೀವು ಕಳೆದ ಬಾರಿ ಖರ್ಚು ಮಾಡಿಯೇ ಇಲ್ಲ. 47% ಎಂದು ನಿನ್ನೆ ಎಲ್ಲ discuss ಮಾಡುತ್ತಿದ್ದಾಗ ಕೇಳಿದೆ. ಸಾಕಷ್ಟು ಹಣ ಇದೆ ಎಂದು ಅನಿಸಿತು. ಏಕೆಂದರೆ 50% ಅಷ್ಟೇ ಖರ್ಚಾಗಿದ್ದರೆ, ಇನ್ನು 50% ಹಣ ಇರಲೇಬೇಕಲ್ಲವೇ? ಆ 50%

ಹಣವನ್ನು, at least ನೀವು ಈಗಲಾದರೂ Assembly ನಡೆಯುವಾಗಲೇ ಕನಿಷ್ಠ 3–3 ಕೋಟಿ ರೂ.ಗಳನ್ನು ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಧಿಕಾರಿಗಳಿಗೆ ಕೊಟ್ಟು, task-force ಮೂಲಕ ಮುಂದಿನ ಮಾರ್ಚ್, ಏಪ್ರೀಲ್, ಮೇ ತಿಂಗಳುಗಳಲ್ಲಿ ಏನು Probelm ನಮಗೆ ಬರಬಹುದು ಎಂಬುದರ ಬಗ್ಗೆ ಅಂದಾಜು ಮಾಡಿ ಪಟ್ಟಿಯನ್ನು ತರಿಸಿಕೊಂಡು ನೀವೇನಾದರೂ ಮಂಜೂರು ಮಾಡಿ ಕ್ರಮ ತೆಗೆದುಕೊಂಡರೆ ನಾವೆಲ್ಲರೂ ಸಹ ಹಳ್ಳಿಗಳಲ್ಲಿ ಓಡಾಡಬಹುದು. ಜನರೂ ಸಹ ನೆಮ್ಮದಿಯಿಂದಿರಲಿಕ್ಕೆ ಆಗುತ್ತದೆ. ಕನಿಷ್ಠ ಮಾಡಬಾರದ ಕೆಲಸವನ್ನು ಆಕಾಶದಿಂದ ಭೂಮಿಗಿಳಿಸಿ ಎಂದು ನಾವು ನಿಮ್ಮನ್ನು ಕೇಳುವುದಿಲ್ಲ. ಜನರಿಗೆ, ಜಾನುವಾರುಗಳಿಗೆ ಕನಿಷ್ಠ ಕುಡಿಯುವ ನೀರಿನ್ನಾದರೂ ಕೊಡಿ. ಕುಡಿಯುವ ನೀರಿಗೆ ಬಹುಶಃ ನೀರನ್ನು ಚರ್ಚೆ ಮಾಡಿ ಉತ್ತರ ಕೊಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ನೀವೇನೇ suo mota ಉತ್ತರ ಕೊಡಬೇಕಾಗುತ್ತದೆ. ನಾವು ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲಿಕ್ಕೆ, ಬರಗಾಲದ ಸಮಸ್ಯೆ ಬಗೆಹರಿಸಲಿಕ್ಕೆ ಮುಂದಾಗುತ್ತೇವೆ, ಈ Assembly ನಡೆಯುವಾಗಲೇ ನಾವು 3 ಕೋಟಿ ರೂ.ಗಳನ್ನೋ, 3 ಕೋಟಿ ರೂ.ಗಳನ್ನೋ ಎಷ್ಟು ಖರ್ಚಾದರೂ ನಾವು ಹಣ ಕೊಡಲಿಕ್ಕೆ ತಯಾರಿದ್ದೇವೆ, ನಾವು ಜಿಲ್ಲಾಧಿಕಾರಿಗಳಿಗೆ, CEO ಗಳಿಗೆ ಆದೇಶವನ್ನು Assembly ನಡೆಯುವಂಥ ಸಂದರ್ಭದಲ್ಲಿಯೇ ಕೊಟ್ಟು warfooting ನಲ್ಲಿ ಪ್ರತಿ ತಾಲ್ಲೂಕಿನಲ್ಲಿ ಅಂದಾಜುಪಟ್ಟಿಯನ್ನು ತಯಾರು ಮಾಡಿ ಈ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಂಡು ಕ್ರಮ ತೆಗೆದುಕೊಳ್ಳದೇ ಇದ್ದರೆ ಬಹುಶಃ ನಾವೆಲ್ಲರೂ ಸಹ Assembly ಆದಮೇಲೆ ಊರುಗಳಲ್ಲಿ ಓಡಾಡದೇ ಇರುವ ಪರಿಸ್ಥಿತಿ ನಮಗೆ ಎದುರಾಗುತ್ತದೆ. ಇಲ್ಲಿಯವರೆಗೆ ಜಿಲ್ಲಾಧಿಕಾರಿ, CEO ಗಳ ಗಮನಕ್ಕೆ ಸಾಕಷ್ಟು ಬಾರಿ ಗಮನಕ್ಕೆ ತಂದಿದ್ದೇವೆ. ಇದುವರೆಗೆ ಮಂತ್ರಿಗಳಾಗಲಿ, ಜಿಲ್ಲಾಡಳಿತವಾಗಲಿ ಬಹುಶಃ ನಮ್ಮ ಅನುಭವವೇ ಎಲ್ಲರಿಗೂ ಇರುತ್ತದೆಂದು ಅಂದುಕೊಂಡಿದ್ದೇನೆ. ಈ ಸಮಸ್ಯೆಯ ಹಿನ್ನೆಲೆಯಲ್ಲಿ task-force ಮೂಲಕ ಸಮಸ್ಯೆಯನ್ನು ಪರಿಹರಿಸಲು, ಕುಡಿಯುವ ನೀರು ಒದಗಿಸಲು ಮತ್ತು ಜಾನುವಾರುಗಳಿಗೆ ಮೇವು,

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಿಕ್ಕೆ ಜಿಲ್ಲಾಡಳಿತದಲ್ಲಿ ಯಾವುದೇ ಮೀಟಿಂಗ್ ಆಗಿಲ್ಲ. ಯಾವುದೇ ಶಾಸಕರನ್ನು ಜಿಲ್ಲಾ ಮಂತ್ರಿಗಳಾಗಲಿ, ಜಿಲ್ಲಾಡಳಿತವಾಗಲಿ ಇಲ್ಲಿಯವರೆಗೆ ಕರೆದು ಮೀಟಿಂಗ್ ಮಾಡಿ ಅದರ ಬಗ್ಗೆ ಏನಾದರೂ ಕ್ರಮ ಜರುಗಿಸುವಂತ ತೀರ್ಮಾನ ಇಲ್ಲಿಯವರೆಗೆ ಆಗಿಲ್ಲ. ತುಮಕೂರಿನಲ್ಲಿ ತಾವೇನಾದರೂ ಮಾಡಿದ್ದೀರೋ, ಏನೋ ಗೊತ್ತಿಲ್ಲ. ಇಲ್ಲಿ ನಮಗಂತೂ ಆಗಿಲ್ಲ. ಮಾಡಿಲ್ಲವೆಂದು ಕೃಷ್ಣಪ್ಪನವರೂ ಹೇಳುತ್ತಿದ್ದಾರೆ. ನಿಮಗೆ ಕೈಮುಗಿದು ವಿನಂತಿಸುತ್ತೇನೆ. ಅತಿವೃಷ್ಟಿ, ಅನಾವೃಷ್ಟಿ ಇದೆಲ್ಲ ಯಾವ ಸರ್ಕಾರವನ್ನು ನೋಡಿ ಬರುವುದಿಲ್ಲ. ಹಿಂದೆ ನಾನು ಮೊದಲನೇ ಬಾರಿ ಶಾಸಕನಾದಾಗ ಬಹುಶಃ ನಿಮ್ಮದೇ ಸರ್ಕಾರವಿತ್ತು. ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು. ಇದು ಅದಕ್ಕಿಂತ ಬರಗಾಲ ಅಲ್ಲ. ಬಹುಶಃ ನಿಮಗೇನೂ ಅನುಭವವಿಲ್ಲದೇ ಇಲ್ಲ. ಅಂಥ ಕೆಟ್ಟ ಪರಿಸ್ಥಿತಿಯಲ್ಲೆಲ್ಲ ಆಡಳಿತ ಮಾಡಿ ಅನುಭವವಿದೆ. ಏಕೆ ನೀವು ಈ ಬಾರಿ ಇಷ್ಟೊಂದು slow? ಏತಕ್ಕೆ ನಿಮಗೆ interest ಇಲ್ಲ? Expect ಮಾಡದೇ ಇದ್ದಕ್ಕಿದ್ದಹಾಗೆ ಅಧಿಕಾರ ಬಂತು, ಅದರಿಂದ ನೀವೇನೂ ಹೊರಗಡೆ ಬಂದಿಲ್ಲವೇ? ನಮ್ಮ ಸಚಿವರು ಯಾರೋ, ನಾವು ಈಗ ತಾನೇ ಅಧಿಕಾರಕ್ಕೆ ಬಂದಿದ್ದೇವೆಂದು ಹೇಳುತ್ತಿದ್ದರು. 2ನೇ ಬಜೆಟ್ ಅನ್ನು ಮಂಡಿಸಿಯೂ ನಾವು ಈಗ ಅಧಿಕಾರಕ್ಕೆ ಬಂದಿದ್ದೇವೆ ಎನ್ನುವ ಮನೋಭಾವ ನಿಮಗೆ ಇದೆ ಎಂದರೆ, ಇದನ್ನು ಯಾವ ರೀತಿ ಹೇಳಬೇಕು? ಯಾವ ರೀತಿ ನಿಮ್ಮನ್ನು ಆಗ್ರಹಪಡಿಸಬೇಕು? ಯಾವ ರೀತಿ ನಮ್ಮ ಪ್ರತಿಭಟನೆಯನ್ನು ನಿಮ್ಮ ಮುಂದೆ ನಿವೇದನೆ ಮಾಡಬೇಕು? Assembly ಯಲ್ಲಿ ಯಾವ ರೀತಿ ನಾವು ನಿಮ್ಮನ್ನು ಚುಚ್ಚಬೇಕೆಂದು ನಮಗೆ ಅರ್ಥವಾಗುತ್ತಿಲ್ಲ. ಮಾತನಾಡತಕ್ಕಂಥದ್ದು, ಟೀಕೆ ಮಾಡುವುದು ಮುಖ್ಯವಲ್ಲ. ನಾನು ಶಾಸಕನಾದ ಮೇಲೆ ಹೆಚ್ಚು ಕಡಿಮೆ 300 ಬೋರ್‌ವೆಲ್‌ಗಳನ್ನು ಕೊರೆಸಿದ್ದೇನೆ. ಸರ್ಕಾರದಿಂದ 50–60 ಬೋರ್‌ವೆಲ್‌ಗಳಿಗೆ payment ಆಗಿದೆ. ಇನ್ನೂ 200–250 ಬೋರ್‌ವೆಲ್‌ಗಳಿಗೆ payment ಆಗಿಲ್ಲ. ಅವರಿಗೆ ಯಾವ ರೀತಿ ನಾವು ಸಮಾಧಾನ ಹೇಳಿ ಮುಂದಕ್ಕೆ ಬೋರ್‌ವೆಲ್ ಕೊರೆಸಬೇಕು? ಇವತ್ತು ನನಗರ ಒಂದು ಊರಿನಿಂದ ಒಂದು ಫೋನ್ ಕಾಲ್ ಬಂತು.

ಅವನು ಎರಡು ಬೋರ್‌ವೆಲ್ ಹಾಕಿಸಿ fail ಆಗಿದೆ. ಅವನಿಗೆ ನಾನು ಕೈಮುಗಿದು ವಿನಂತಿ ಮಾಡಿದರೆ ಅವನು, ಕೊನೆಯಪಕ್ಷ ಇದೊಂದು ಬೋರ್ ಹಾಕಿಸಿಬಿಡಣ್ಣ, ಬರದಿದ್ದರೆ ಪರವಾಗಿಲ್ಲ, ಪಕ್ಕದ ಊರಿನಿಂದ ತರುತ್ತೇವೆ, ನಿಮ್ಮನ್ನು ಕೇಳುವುದಿಲ್ಲವೆನ್ನುತ್ತಾನೆ. ಇನ್ನೊಂದು ಬೋರ್ ಹಾಕಿದರೆ ನೀರು ಬರುತ್ತದೆನ್ನುವ ಏನೋ ಒಂದು ವಿಶ್ವಾಸ, ನಂಬಿಕೆ, ಆಸೆಯನ್ನು ಅವನು ವ್ಯಕ್ತಪಡಿಸುತ್ತಾನೆ. ಅವರು ರಸ್ತೆ ಕೇಳಿದರೆ ನಾವು ಪರವಾಗಿಲ್ಲಪ್ಪ 6 ತಿಂಗಳು ತಡೆದುಕೋ ಎನ್ನಬಹುದು ಅಥವಾ ಅಂಗನವಾಡಿ ಕಟ್ಟಡ ಕೇಳಿದರೆ 6 ತಿಂಗಳು ತಡೆಯಪ್ಪ ಎನ್ನಬಹುದು ಅಥವಾ ಇನ್ನು ಯಾವುದಾದರೊಂದು ಸರ್ಕಾರದ ಯೋಜನೆಯನ್ನು ಕೇಳಿದರೆ ಹೇಳಬಹುದು. ಕುಡಿಯುವ ನೀರಿಗೋಸ್ಕರ ಒಂದು ಬೋರ್‌ವೆಲ್ ಹಾಕಿಸಿಕೊಡಿ ಎಂದರೆ 15 ದಿವಸ ಬಿಟ್ಟು ಹಾಕಿಸುತ್ತೇನೆಂದರೆ ಸಾಧ್ಯವೇ? ನಾವು ಉತ್ತರ ಹೇಳಲಿಕ್ಕಾಗುತ್ತದೆಯೇ? ಜನರಿಗೆ ನಾವು ಯಾವ ರೀತಿ ಸಮಾಧಾನ ಮಾಡುವುದು? ನಮಗಂತೂ ತಾಲ್ಲೂಕಿನಲ್ಲಿ ಓಡಾಡಲಿಕ್ಕಾಗದ ಪರಿಸ್ಥಿತಿ ಎದುರಾಗುತ್ತಿದೆ. 2-3 ಹಂತಗಳಲ್ಲಿ ನೀವು ಈ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಬರಗಾಲದ ಹಿನ್ನೆಲೆಯಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ನಾವು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯವೋ ಅದಕ್ಕೆ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಕುಡಿಯುವ ನೀರಿಗೆ, ಬೋರ್‌ವೆಲ್‌ಗೆ ಮತ್ತು pipeline ಗೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳಲಿಕ್ಕೆ RDPR ಮತ್ತು ಜಿಲ್ಲಾಧಿಕಾರಿಗಳಿಗೆ ಇಬ್ಬರಿಗೂ ಸಹ ಕನಿಷ್ಠ 3 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿ. ಬರಗಾಲ ಹೊರತುಪಡಿಸಿ ಕುಡಿಯುವ ನೀರಿಗೇ ವಿಶೇಷವಾಗಿ ಮಾಡಬೇಕು. ಜಯಚಂದ್ರರವರೆ, ನಾನು ಕಳೆದ Assembly ಯಲ್ಲಿ ಮಾತನಾಡಿದಾಗ RDPR and Revenue Minister ಹಣ ಇದೆ ಎಂದು ಹೇಳಿದರು. ಆದರೆ, ಹಲವಾರು ಕಾರಣಗಳಿಂದ ಮಂಜೂರಾಗಿರುವ ಕೆಲಸಗಳಿಗೆ payment ಆಗದೇ ನಿಮ್ಮ PD account ನಲ್ಲಿ ಹಣ ಇದೆ. ಅದೇನಾಗುತ್ತದೆ ಎಂದರೆ, ಕೆಲವು ತಾಲ್ಲೂಕಿನಲ್ಲಿ ಮಂಜೂರಾಗಿದೆ, ಕೆಲವು ತಾಲ್ಲೂಕಿನಲ್ಲಿ ಆಗಿಲ್ಲ. ಅನೇಕ ಕಾರಣಗಳಿಂದ ಈ ರೀತಿಯಾಗಿದೆ. ಆ ಹಣವನ್ನು ನೀವು ಲೆಕ್ಕ ಇಟ್ಟುಕೊಂಡು ನಿಮ್ಮ ಕಾರ್ಯದರ್ಶಿಯವರು ಎಲ್ಲಾ

ಜಿಲ್ಲಾಧಿಕಾರಿಗಳ account ನಲ್ಲಿ ಇಷ್ಟು ಹಣ ಇದೆ ಎಂದು ಹೇಳುವುದಲ್ಲ. ವಾಸ್ತವವಾಗಿ ತಾಲ್ಲೂಕುವಾರು ಸಮಸ್ಯೆಗಳನ್ನು ಅವರು ಅಧ್ಯಯನ ಮಾಡಿ ನಿಮಗೆ ವರದಿ ಕೊಡಬೇಕು. ಅದರ ಹಿನ್ನೆಲೆಯಲ್ಲಿ ನೀವು ಹಣವನ್ನು release ಮಾಡಬೇಕು. ಕೆಲವು ತಾಲ್ಲೂಕುಗಳಲ್ಲಿ ಬೇಕಿಲ್ಲದೇ ಇರಬಹುದು. ಮಳೆ ಮತ್ತು ನೀರಾವರಿಯ ಸೌಲಭ್ಯ ಇರುವ ಕಡೆ ಈ ತರಹದ ಸಮಸ್ಯೆ ಇಲ್ಲದೇ ಇರಬಹುದು. ಆದರೆ, ಎಲ್ಲಿ ನೀರಾವರಿ ಹೆಚ್ಚಿಲ್ಲ, ಮಳೆ ಹೆಚ್ಚಿಗೆ ಆಗಿಲ್ಲ, ಅಂಥ ಕಡೆ ಸಮಸ್ಯೆ ಹೆಚ್ಚಿದೆ. ಅಂಥವರಿಗೆ ಹೆಚ್ಚು ಹಣ ಬೇಕಾಗುತ್ತದೆ. ನೀವು ಸಾರಾಸಗಟಾಗಿ ಇಡೀ ರಾಜ್ಯಕ್ಕೆ ಒಂದೇ ಉತ್ತರ, ಒಂದೇ ಮಂತ್ರ, ಜಿಲ್ಲೆಗೆ ಕೊಟ್ಟು 8 ತಾಲ್ಲೂಕು ಇದ್ದರೆ 8 ತಾಲ್ಲೂಕುಗಳಿಗೂ 20 ಲಕ್ಷ ರೂ. ಹಂಚಿ, 10 ಲಕ್ಷ ರೂ. ಹಂಚಿ ಎಂದರೆ ಆಗುವುದಿಲ್ಲ. ನಮ್ಮ ಹಳ್ಳಿಯಲ್ಲಿ ಯುಗಾದಿ ಹಬ್ಬದಲ್ಲಿ ವರ್ಷತುಡುಕು ಎಂದು ಮಾಡುತ್ತಾರೆ. ಬೆಳಗ್ಗೆ ಎದ್ದು ಎಲ್ಲರ ಮನೆಗೂ 2–2 ಕೆ.ಜಿ. ಎಂದು ಮಾಡುತ್ತಾರೆ. ಆ ತರಹ ಹಂಚಿಕೆಯನ್ನು ಮಾಡುವುದರಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ. ಪೂರ್ಣಪ್ರಮಾಣದ ಆದ್ಯತೆ, ಅವಶ್ಯಕತೆಗನುಗುಣವಾಗಿ ನೀವು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ಗಮನಹರಿಸದೇ ಇದ್ದರೆ ಬಹುಶಃ ಈ ಶಾಪ ನಿಮಗೆ, ನಮಗೆಲ್ಲರಿಗೂ ತಟ್ಟುತ್ತದೆ. ಇದು ಯಾರಿಗೋ ಒಬ್ಬರಿಗೆ ತಟ್ಟುವಂಥದ್ದಲ್ಲ. ಚುನಾವಣೆ ಉದ್ದೇಶವಿಟ್ಟುಕೊಂಡು ತಾವು ಮಾಡುವ ಅವಶ್ಯಕತೆ ಇಲ್ಲ. ಆದರೆ, ಚುನಾವಣೆಗೆ ಹೋಗುವಂತ ಸಂದರ್ಭ ಇಲ್ಲದೇ ಇದ್ದರೆ ನಾವು ನಿಮ್ಮನ್ನು ಕಾಡಿಬೇಡಿ ಅಧಿಕಾರಿಗಳ ಹತ್ತಿರ ಏನೋ ಒಂದು ಚೂರು ಮಾಡಿ at least ಏನಾದರೊಂದು ದಾರಿ ಹುಡುಕುತ್ತಿದ್ದೆವು. ಆದರೆ, ನಾವೂ ಚುನಾವಣೆಗೆ ಹೋಗುತ್ತೇವೆ. ಅಧಿಕಾರಿಗಳೂ ಚುನಾವಣೆಗೆ engage ಆಗುತ್ತಾರೆ. ಆಗ ನಾವು ಇವು ಯಾವುದಕ್ಕೂ ನಮ್ಮ ಪ್ರಯತ್ನ ಮಾಡಲಿಕ್ಕೆ ನಮಗೆ ತೊಂದರೆ ಆಗುತ್ತದೆ. ಅದಕ್ಕೋಸ್ಕರ ಕನಿಷ್ಠ February end, March 10ನೇ ತಾರೀಖಿನೊಳಗಡೆ ಇವೆಲ್ಲ 3 ತಿಂಗಳ ಸಮಸ್ಯೆಗೆ ಪೂರ್ಣ ಪ್ರಮಾಣದಲ್ಲಿ ನಾವು ತಯಾರಾಗಿ ಅವರ ಸಮಸ್ಯೆಗೆ ಪರಿಹಾರ ಕೊಟ್ಟು ನಂತರ ಚುನಾವಣೆಯನ್ನು ಎದುರಿಸುವ ಪರಿಸ್ಥಿತಿಗೆ ಹೋದರೆ ಬಹುಶಃ

ಜನರು ನೆಮ್ಮದಿಯಲ್ಲಿರುತ್ತಾರೆ. ಆ ಒಂದು ನಿಟ್ಟಿನಲ್ಲಿ ಸರ್ಕಾರ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಕಂದಾಯ ಮತ್ತು ಕಾನೂನು ಸಚಿವರು ಇಲ್ಲಿಯೇ ಇದ್ದಾರೆ. ಮಾನ್ಯ ಅಧ್ಯಕ್ಷರಾದ ತಮಗೆ ಈ ಸದನದಲ್ಲಿ ಈ ಸಮಸ್ಯೆಯನ್ನು ಹತ್ತಾರು ಬಾರಿ ನೋಡಿದ ಅನುಭವವಿದೆ. ದಯಮಾಡಿ ಮಾನ್ಯ ಅಧ್ಯಕ್ಷರು ವಿಶೇಷವಾಗಿ ಸದನದಲ್ಲಿ ಹೇಳುವುದಕ್ಕಿಂತ ಸದನ ಮುಗಿದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ವಿಶೇಷವಾಗಿ ತಮ್ಮ ಕೊಠಡಿಗೆ ಕರೆದು ಈ ವಿಚಾರದಲ್ಲಿ ಯಾವುದೇ ತಾರತಮ್ಯವಿಲ್ಲದೆ ಹೆಚ್ಚಿನ ಆದ್ಯತೆ ಕೊಟ್ಟು ಪ್ರಯತ್ನ ಮಾಡಿ ಕೆಲಸ ಮಾಡಬೇಕೆನ್ನುವುದರ ಬಗ್ಗೆ ತಾವು ಏನಾದರೂ ಡೈರೆಕ್ಷನ್ ಕೊಟ್ಟರೆ ಬಹುಶಃ ಇದರ ಉಪಯೋಗ ಈ ರಾಜ್ಯದ ಕುಡಿಯುವ ನೀರಿನ ಸಮಸ್ಯೆ ಎದುರಿಸತಕ್ಕಂಥ ಗ್ರಾಮಗಳಿಗೆ, ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ದಯಮಾಡಿ ಇದನ್ನು ತಾವು ವಿಶೇಷವಾದ ಪ್ರಕರಣವೆಂದು ತೆಗೆದುಕೊಳ್ಳಬೇಕಾಗುತ್ತದೆ. ಬೇರೆ ವಿಷಯದಲ್ಲಿ ನೀವು ಯಾವ ತರಹ ಉದಾಸೀನ ಮಾಡಿದರೂ ದಯಮಾಡಿ ಇದರಲ್ಲಿ ತಾವೂ ಉದಾಸೀನ ಮಾಡುವುದು ಬೇಡವೆಂದು ಹೇಳಿ ನಾನು ವಿನಂತಿ ಮಾಡಿ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ): ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಘೋಷಣೆ ಮಾಡುವಾಗ ಬಹುಶಃ ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಸಿಂಧಗಿ ಪ್ರತಮವೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ, ಇವರು ಸಿಂಧಗಿಯನ್ನು ಪಕ್ಕಕ್ಕೆ ತಳ್ಳಿ ಉಳಿದ ತಾಲ್ಲೂಕುಗಳನ್ನು ಬರಗಾಲ ತಾಲ್ಲುಕುಗಳೆಂದು ಘೋಷಣೆ ಮಾಡಿದ್ದಾರೆ. ಏಕೆ ಈ ತಾರತಮ್ಯ? ಏಕೆಂದರೆ ಬಹುಶಃ ಬಿಜೆಪಿಯಿಂದ ಆರಿಸಿ ಬಂದಿರುವ ಕ್ಷೇತ್ರ ಸಿಂಧಗಿ ಎಂದು ತಿಳಿದು ತಾರತಮ್ಯ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು: ಆ ರೀತಿ ಅಲ್ಲ. ಎಷ್ಟು ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡಿದ್ದಾರೆ? ಏನು ಕಾರಣಗಳನ್ನು ಕಂಡು ಹಿಡಿದುಕೊಂಡಿದ್ದರು? ಇದು ತಪ್ಪೋ ಸರಿಯೋ?

ಶ್ರೀ ಭೂಸನೂರ ರಮೇಶ್ ಬಾಳಪ್ಪ: ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಮಾಡಬೇಕು. ಮುದ್ದೇಬಿಹಾಳ, ಇಂಡಿ ಮತ್ತು ಬಿಜಾಪುರ ಈ ಮೂರು ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದಾರೆ. ಹಾಗಾದರೆ, ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಯಾವ ಮಾನದಂಡ ಇಟ್ಟುಕೊಂಡು ಬರಗಾಲ ಪ್ರದೇಶವೆಂದು ಘೋಷಣೆ ಮಾಡಿದ್ದಾರೆಂದು ಈ ಸಭೆಗೆ ಮಾನ್ಯ ಸಚಿವರು ತಿಳಿಸಬೇಕು. ಇದರ ಜೊತೆಗೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರ ಜಿಲ್ಲೆಗೆ ಬಂದು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಕಳೆದ ವರ್ಷದ್ದು ಈ ಸಂಬಂಧವಾಗಿ ಕೊಡಬೇಕಾಗಿರುವ ಇನ್ನೂ ಹತ್ತು ಕೋಟಿ ರೂಪಾಯಿ ಬಾಕಿ ಇದೆ. ಇದರ ಜೊತೆಗೆ ಈ ವರ್ಷದ್ದು ಅನುದಾನ ಬಿಡುಗಡೆಯಾಗಿಲ್ಲ. ನಾವು ಬರತಕ್ಕಂತ ಅನುದಾನದಲ್ಲಿ ಕುಡಿಯುವ ನಿರಿನ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು? ಕಳೆದ ವರ್ಷದ ಬಾಕಿ ಅನುದಾನವೇ ಇನ್ನೂ ಬಿಡುಗಡೆಯಾಗಿಲ್ಲ. ಅದಕ್ಕಾಗಿ ಇಂಥ ಜ್ವಲಂತ ಸಮಸ್ಯೆಗಳಿಗೆ ತಮ್ಮ ಮೂಲಕ ಬೇಗನೆ ಪರಿಹಾರ ಸಿಗುತ್ತದೆ ಎಂದು ನಾನು ಭಾವಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಉತ್ತರ ಹೇಳಿ, ಸ್ವಾಮಿ.

ಶ್ರೀ ಎಂ.ಟಿ. ಕೃಷ್ಣಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ. . .

ಅಧ್ಯಕ್ಷರು : ಬೇಗ ನಾವು ಇದನ್ನು ಪೂರೈಸಬೇಕಾಗಿದೆ. ಇನ್ನೊಂದು ಸಬ್ಜೆಕ್ಟ್ ಇದೆ. ಪಕ್ಕದವರು ಎಲ್ಲಾ ಹೇಳಿದರಲ್ಲ?

ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ) :- ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ಬರಗಾಲದ ಬಗ್ಗೆ ಬಜೆಟ್‌ನಲ್ಲೂ ಹೆಚ್ಚಾಗಿ ಚರ್ಚೆಯಾಗಿಲ್ಲ. ಬರಗಾಲವೆಂದು ಘೋಷಣೆ ಮಾಡುವ ಉದ್ದೇಶವಾದರೂ ನನಗೆ ಅರ್ಥವಾಗುತ್ತಿಲ್ಲ, ಅದರ ಔಚಿತ್ಯ ಏನೆಂದು ಅರ್ಥವಾಗುತ್ತಿಲ್ಲ. ಎಲ್ಲೆಲ್ಲಿ ಬರಗಾಲ ಘೋಷಣೆಯಾಗಿದೆ, ಅಲ್ಲಿ ಏನೇನು ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ಸರ್ಕಾರ ಇಲ್ಲಿಯವರೆಗೆ ಗಮನ ಹರಿಸಿಲ್ಲ. ಕೇವಲ 10 ಲಕ್ಷ ರೂಪಾಯಿ ಕೊಟ್ಟು ಬಿಟ್ಟರೆ ಅದರಲ್ಲಿ 10 ಬೋರ್ ಹಾಕಬಹುದು ಅಥವಾ 5 ರಿಂದ 6 ಬೋರ್ ಹಾಕಿಸಬಹುದು. ಏನಾಗಿದೆ ಎಂದರೆ, ಕುಡಿಯುವ ನೀರಿಗೆ ಚಿಂತನೆ ಮಾಡಿ surface water ಹೆಚ್ಚು ಒತ್ತನ್ನು ಕೊಡಬೇಕು. Multi-villager scheme ಜಾರಿ ಮಾಡುವಾಗ surface Water ಗೆ ಹೆಚ್ಚಿನ ಒತ್ತನ್ನು ಕೊಡಲಿಕ್ಕೆ ಬಹಳಷ್ಟು files ನಿಮ್ಮ ಹತ್ತಿರ pending ಇವೆ. ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ, RDPR Minister ಇಲ್ಲ, ಯಾರು ನೀರು ಕೊಡುವವರೋ ಅವರೇ ಇಲ್ಲ. ಈಗ ಏನಾಗಿದೆ ಎಂದರೆ, surface water ಗೆ ಸಂಬಂಧಪಟ್ಟಂತೆ ಸುಮಾರು ಹತ್ತಾರು files ಬಂದು RDPR ಇಲಾಖೆಯಲ್ಲಿ ಹಾಗೆಯೇ ಕುಳಿತಿವೆ. ಅದನ್ನು ನೋಡುವ ಸೌಜನ್ಯವೂ ಇಲ್ಲ. ಆದಷ್ಟು ಬೇಗ ಆ files ನ್ನು clear ಮಾಡಿ. ಕೇಂದ್ರ ಸರ್ಕಾರ ಸಾಕಷ್ಟು ಹಣ ಕೊಡುತ್ತಿದೆ. ನೀವೇನು invest ಮಾಡುವ ಅವಶ್ಯಕತೆಯಿಲ್ಲ. Files clear ಮಾಡಲಿಕ್ಕೆ ನಿಮಗೇನು ತೊಂದರೆ? RDPR ನ files ಏಕೆ ಇಟ್ಟುಕೊಂಡಿದ್ದೀರಿ? ದಯಮಾಡಿ, Multi-villager scheme ನಲ್ಲಿ ಯಾವ್ಯಾವ files ಇವೆ, ಅವುಗಳನ್ನೆಲ್ಲಾ clear ಮಾಡಿಕೊಳ್ಳಬೇಕು. ಕುಡಿಯುವ ನೀರಿಗೆ ಹತ್ತಾರು ಸಾರಿ ಕೇಳಿದ್ದೇವೆ, ಸಣ್ಣ ಪುಟ್ಟ ಏತ ನೀರಾವರಿಗೆ ಕೇಳಿದ್ದೇವೆ, ಕೆರೆ ತುಂಬಿಸಿ ತನ್ಮೂಲಕ ಕುಡಿಯುವ ನೀರಿಗೆ ಕೊಡಿ, ಬೋರ್ ಹೊಡೆದು ಹೊಡೆದು ಎಲ್ಲೂ ನೀರು ಬರುತ್ತಿಲ್ಲ. 1200, 1300 ಅಡಿಯವರೆಗೆ ಹೋದರೂ ನೀರು ಬರುತ್ತಿಲ್ಲ. ನಮ್ಮ ದಬ್ಬೆಘಟ್ಟದಲ್ಲಿ 1400 ಅಡಿಯವರೆಗೆ ಹೋದರೂ ನೀರು ಬರುತ್ತಿಲ್ಲ. ಸಣ್ಣ ಏತ ನೀರಾವರಿ ಮಾಡಿ ಕೆರೆ ತುಂಬಿಸಿ ತನ್ಮೂಲಕ ಕುಡಿಯುವ ನೀರಿಗೆ ಕೊಡಿ ಎಂದು ನಾವು ಹತ್ತಾರು ಸಾರಿ proposals ಕಳುಹಿಸಿದರೂ clear ಆಗಿಲ್ಲ.

ನೀವು ಎಷ್ಟೇ ಬೋರ್ ಹೊಡೆಸಿದರೂ ಸಹ ಅದು fulfil ಆಗುವುದಿಲ್ಲ. ಈ ವಾರ ಹೊಡೆಸುತ್ತಿರಿ, ಮುಂದಿನ ವಾರ ಅದು dry ಆಗುತ್ತದೆ. ಸಾಧ್ಯವಾದಷ್ಟು surface waterಗೆ ಗಮನ ನೀಡಿ ಕೆರೆ ತುಂಬಿಸಿ ತನ್ಮೂಲಕ ಕುಡಿಯುವ ನೀರಿಗೆ ಆದ್ಯತೆ ಕೊಟ್ಟರೆ ಬಹುಶಃ ಈ ಸಮಸ್ಯೆ solve ಆಗುತ್ತದೆ ವಿನಹಾ ಇಲ್ಲದಿದ್ದರೆ ಯಾವಾಗಲೂ ಇದು ಬಗೆಹರಿಯುವುದಿಲ್ಲ. ಬೋರ್ ಹೊಡೆಸಿ ವರ್ಷಾನುಗಟ್ಟಲೆ ಆದರೂ ಅದಕ್ಕೆ pump, motor ಸಿಗುವುದಿಲ್ಲ, electricity ಸಿಗುವುದಿಲ್ಲ. ಬೋರ್ ಹೊಡೆಸುತ್ತೇವೆ, ಇದರಿಂದಾಗಿ ದುಡ್ಡು ಖರ್ಚಾಗುತ್ತದೆ, ಆದರೆ ಜನಗಳಿಗೆ ಕುಡಿಯುವ ನೀರು ಸಿಕ್ಕುವುದಿಲ್ಲ. ಅದರ ಬಗ್ಗೆ ನಮ್ಮ ಚಲುವರಾಯಸ್ವಾಮಿಯವರು ಹೇಳಿದ ಹಾಗೆ, ದಯಮಾಡಿ war-footing ನಲ್ಲಿ ಕುಡಿಯುವ ನೀರಿಗೆ ಹೆಚ್ಚು ಆದ್ಯತೆ ಕೊಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಬಂದರು, ಅವರು ಇಲ್ಲಿಯೇ ಇದ್ದಾರೆ. 47 ರಿಂದ 50% ಬಜೆಟ್ ಖರ್ಚಾಗಿದೆ. ಇನ್ನು 65 ಸಾವಿರ ಕೋಟಿ ದುಡ್ಡು ಇದೆ. ನಾವು ಏನು ಕೇಳುತ್ತಿದ್ದೇವೆ, ಸ್ವಾಮಿ?

ಅಧ್ಯಕ್ಷರು : ಅದಕ್ಕಲ್ಲ ಇದಕ್ಕೆ ಬನ್ನಿ. ಇದನ್ನು ಬರಗಾಲಕ್ಕೆ ಹೇಗೆ paste ಮಾಡುವುದು ಹೇಗೆ. ಬಜೆಟ್ ಮೇಲೆ ಇದನ್ನು ಮಾತನಾಡಿ ಎಂದರೆ ಒಬ್ಬರೂ ಮಾತನಾಡುವುದಿಲ್ಲ.

ಶ್ರೀ ಎಂ. ಟಿ. ಕೃಷ್ಣಪ್ಪ : ಕುಡಿಯುವ ನೀರಿಗೆ ಕೊನೆ ಪಕ್ಷ.. . ನಿಮ್ಮ ಕಡೆ ಬಹಳ ತಂಪಾಗಿದ್ದೀರಿ, ನಮ್ಮ ಕಡೆ ಎಲ್ಲಾ dry land ನಲ್ಲಿ ಇದ್ದೇವೆ.

ಅಧ್ಯಕ್ಷರು : ಅದು ಬೇಡ, ಆಮೇಲೆ ಮಾಡೋಣ. ತಂಪಾಗಿದ್ದರೆ ಮನೆಗೆ ಹೋಗಿ ಕುಳಿತುಕೊಂಡು....

ಶ್ರೀ ಎಂ. ಟಿ. ಕೃಷ್ಣಪ್ಪ : ಒಂದೊಂದು ಕ್ಷೇತ್ರಕ್ಕೆ ಮೂರು ಕೋಟಿಯಾದರೂ ಕೊಡಬೇಕು. ಇದುವರೆವಿಗೂ ಹತ್ತು ರೂಪಾಯಿ ಕೊಟ್ಟಿಲ್ಲ. ಬರಗಾಲ ಪೀಡಿತ ಪ್ರದೇಶವೆಂದು declare ಮಾಡಿ ಹತ್ತು ರೂಪಾಯಿ ಕೊಡದಿದ್ದರೆ ನಾವು ಹೇಗೆ ಮುಂಬರುವ parliament election ನಲ್ಲಿ ಓಟು ಕೇಳುವುದಕ್ಕಾಗುತ್ತದೆ? ನಮ್ಮ ಪಾರ್ಟಿ, ಇನ್ನೊಂದು ಪಾರ್ಟಿ ಎಂದಲ್ಲ, ಯಾವ

ಪಾರ್ಟಿಯವರೂ ಕೇಳುವುದಕ್ಕಾಗುವುದಿಲ್ಲ. ಜನ ಮೇಲೆ ಬೀಳುತ್ತಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಅಧಿವೇಶನ ಮುಗಿಯುವುದರೊಳಗಾಗಿ task-forceಗೆ ಮೂರು ಕೋಟಿ ಬಿಡುಗಡೆ ಮಾಡಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿ ಕೊಡಬೇಕು, ತನ್ಮೂಲಕ ಏನಾದರೂ ಜನರ ಬಳಿಗೆ ಹೋಗಲಿಕ್ಕೆ ಒಂದು ಅವಕಾಶ ಆಗುತ್ತದೆ ಎಂದು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ.

ಅಧ್ಯಕ್ಷರು : ಆಯಿತು, ಮಂತ್ರಿಗಳೇ ಉತ್ತರಿಸಿ, ಸಾಕು ಬಿಡಿ ಟೈಂ ಇಲ್ಲ. ಇನ್ನೊಂದು ಸಬ್ಜೆಕ್ಟ್ ಇದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಬೋರ್ ಕೊರೆಸಿ ಬೀಳದೆ ಹೋದರೆ ಬೇರೆ ಕಡೆಯಿಂದ water tank ಮೂಲಕ ನೀರನ್ನು supply ಮಾಡುವುದಕ್ಕೆ ಒಂದು ಆದೇಶ ಕೊಡಬೇಕು. ಜಿಲ್ಲಾಧಿಕಾರಿಗಳು ಅದಕ್ಕೆ permission ಕೊಡುತ್ತಿಲ್ಲ. ದಯಮಾಡಿ ಈ ಸಂದರ್ಭದಲ್ಲಿ ಅದಕ್ಕೊಂದು ಆದೇಶ ಮಾಡಬೇಕು.

ಅಧ್ಯಕ್ಷರು : ಸದಸ್ಯರಲ್ಲಿ ವಿನಂತಿ. ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ಅವಕಾಶ ಮಾಡಿ ಕೊಡಿ. ಬರಗಾಲದ ಸಮಸ್ಯೆಯಿರುವುದರಿಂದ ಮಾನ್ಯ ಚಲುವರಾಯ ಸ್ವಾಮಿಯವರು ಹೇಳಿದ ಹಾಗೆ ಪಾಪ ಊರಿಗೆ ಹೋಗುವ ಹಾಗೆ ಇಲ್ಲ. ವಿಷಯ ಗಂಭೀರವಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರುಗಳು ಬಹಳ ಗಂಭೀರವಾದ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಇವತ್ತಿನ ಬರಗಾಲದ ಗಂಭೀರತೆಯನ್ನು ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೇವೆ. ನಮ್ಮ ಸರ್ಕಾರ ಬಂದು ಈಗಾಗಲೇ 9 ತಿಂಗಳಾಗುತ್ತಿವೆ. ಮಾನ್ಯ ಮುಖ್ಯಮಂತ್ರಿಗಳು 13 ನೇ ತಾರೀಖು ಪ್ರಮಾಣ ವಚನ ಸ್ವೀಕರಿಸಿದ ಮೇಲೆ 18/19 ನೇ ತಾರೀಖು ನಮ್ಮ ಮಂತ್ರಿಮಂಡಲ ರಚನೆಯಾಯಿತು. ಇದಾದ ನಂತರ ನಾವು ಮೊದಲನೇ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆಯನ್ನು ಕರೆದಿದ್ದೆವು. ಕಾರಣ ನಾವು ಅಧಿಕಾರಕ್ಕೆ ಬಂದಾಗ ಅನಾವೃಷ್ಟಿಯಿತ್ತು, ಬರಪೀಡಿತವಾಗಿತ್ತು, ಆ ಸಮಯದಲ್ಲಿ ಆಗಲೇ ನಾವು ಈ ಬರವನ್ನು ಎದುರಿಸಲಿಕ್ಕೆ ನಾವೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಮಾಲೋಚಿಸಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ, ನಾವು ಮುಖ್ಯವಾಗಿ ಬರ ಬಂದಾಗ ಮೊದಲನೆ ಆದ್ಯತೆ ಕುಡಿಯುವ ನೀರಿಗೆ ಕೊಡಬೇಕೆಂದು ಒಂದು ಮಾತು ಹೇಳಿದರು. ಯಾವುದೇ ರೀತಿಯಲ್ಲಿಯೂ ಕುಡಿಯುವ ನೀರಿಗೆ ತೊಂದರೆಯಾಗಬಾರದು. ಎರಡನೆಯದಾಗಿ, ಗೋಶಾಲೆಗಳನ್ನು ಪ್ರಾರಂಭಿಸಬೇಕು. ಯಾವುದೇ ಜಾನುವಾರುಗಳನ್ನು ಮೇವಿಗೆ ಕೊರತೆ ಇರಬಾರದು. ಮೂರನೆಯದು ಪ್ರತಿಯೊಬ್ಬರಿಗೂ ಕೈಗೆ ಕೆಲಸ ಕೊಡುವುದು. ಏಕೆಂದರೆ, ಯಾರೂ ಗುಳೆ ಹೋಗಬಾರದು ಎನ್ನುವ ದೃಷ್ಟಿಯಿಂದ ಈ ಮೂರು ಕಡೆಗೆ ಗಮನ ಕೊಡಬೇಕೆಂದು ಅಂದಿನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಬರಿ ಇಷ್ಟೇ ಹೇಳಿದರೆ ಸಾಲದು. ಇದರ ಜೊತೆಗೆ ನಾವು ಯಾವುದೇ ರೀತಿಯ ಹಣಕಾಸಿನ ಕೊರತೆ ಇರದ ರೀತಿಯಲ್ಲಿ ಸರ್ಕಾರ ಅದರ ಕಡೆಗೆ ಗಮನ ಕೊಡುತ್ತೇವೆ, ನೀವು ಯಾವುದೆ ರೀತಿಯಲ್ಲಿ ತೊಂದರೆಯಾಗದಂತೆ ಮಾಡಬೇಕೆಂದರು. ಹಣ ಕೊಟ್ಟಿದ್ದೇವೆ. ಇರಲಿ ನೀವು ವಿರೋಧ ಪಕ್ಷದಲ್ಲಿದ್ದಾಗ ಮಾತನಾಡುತ್ತೀರಿ, ತಾವು ಕೇಳುವುದು ತಪ್ಪೇನಿಲ್ಲ. ತಾವು ಎಲ್ಲರೂ ಕೂಡ ಒಂದು ಸಲ ಹೋಗಿ ನೋಡಿ. ಮಾನ್ಯ ಕಾಗೇರಿಯವರು ಗಮನ ಕೊಟ್ಟಿಲ್ಲ ಎನ್ನುವ ರೀತಿಯಲ್ಲಿ ಹೇಳಿದರು. ನಾನು ಆ ಸಬ್ ಕಮಿಟಿಯ ಛೇರ್ಮನ್ ಆಗಿದ್ದೇನೆ. ನಾನು ಇದರ ಬಗ್ಗೆ ಬಹಳ ಗಮನ ಕೊಟ್ಟಿದ್ದೇವೆ. ಸಭೆಗಳನ್ನು ಕರೆದಿಲ್ಲ ಎಂದು ಹೇಳಿದ್ದಾರೆ. ಪ್ರತಿಯೊಂದು ಹಂತ ಹಂತದಲ್ಲಿಯೂ ಕೂಡ 98 ತಾಲ್ಲೂಕುಗಳನ್ನು declare ಮಾಡಬೇಕಾದರೆ ಅದಕ್ಕೊಂದು ಮಾನದಂಡ ಇದೆ. ಅದನ್ನು ಚರ್ಚೆ ಮಾಡಿ ನಾವು ನಾವು ಕೂಡ ತೀರ್ಮಾನ ತೆಗೆದುಕೊಂಡಿದ್ದೇವೆ. ಇದಾದ

ನಂರವೂ ನಾವು ಮತ್ತೆ ಅನಾವೃಷ್ಟಿ ಎದುರಿಸತಕ್ಕಂಥ ಸಂದರ್ಭದಲ್ಲಿ ಅತಿವೃಷ್ಟಿಯಾಯಿತು. ಇದು ತಮಗೆಲ್ಲರಿಗೂ ಕೂಡ ಗೊತ್ತಿದೆ. ಮುಂಗಾರು ಮಳೆ ಬಹಳ ಬೇಗ ಬಂದರೂ ಕೂಡ ಪ್ರವಾಹವೂ ಕೂಡ ಬಂತು. ಹೀಗಾಗಿ ಅತಿವೃಷ್ಟಿ ಮತ್ತು ಅನಾವೃಷ್ಟಿಯನ್ನು ನೋಡಿದ್ದೇವೆ. ಇದೇ ಸದನದಲ್ಲಿ ಮಾನ್ಯ ಕಾಗೇರಿಯವರು ಅತಿವೃಷ್ಟಿಯ ಬಗ್ಗೆ ಬಹಳವಾಗಿ ಪ್ರಸ್ತಾಪಿಸಿದರು. ಎಲ್ಲರೂ ಕೂಡ ಮಾತನಾಡಿದರು. ಆ ಸಮಯದಲ್ಲಿಯೂ ಅತಿವೃಷ್ಟಿಯನ್ನು ಯಾವ ರೀತಿಯಲ್ಲಿ ಎದುರಿಸಬೇಕೆಂದು ವ್ಯವಸ್ಥಿತವಾಗಿ ರಾಜ್ಯ ಸರ್ಕಾರ ಎಷ್ಟು ಆಸಕ್ತಿ ವಹಿಸಿ, ಕಾಳಜಿ ವಹಿಸಿ, ತೊಂದರೆ ಎದುರಿಸತಕ್ಕಂಥ ರೀತಿಯಲ್ಲಿ ಅಂದರೆ ಸಂಕಷ್ಟಕ್ಕೀಡಾದಂತಹ ಜಿಲ್ಲೆಗಳಿಗೆ ನಾವು ಯಾವ ರೀತಿಯ ನೆರವನ್ನು ಕೊಟ್ಟಿದ್ದೇವೆ, ಯಾವ ರೀತಿಯಲ್ಲಿ ಅವರ ನೆರವಿಗೆ ಹೋಗಿದ್ದೇವೆ ಎನ್ನುವುದನ್ನು ಆ ಸಮಯದಲ್ಲಿ ಹೇಳಿದ್ದೆವು. ಈಗ ಮತ್ತೆ ಮುಂಗಾರು ವಿಫಲವಾಗಿದೆ. ಯಾವ ರೀತಿಯಾಗಿದೆ ಎಂಬುದು ನಿಮಗೆಲ್ಲಾ ಗೊತ್ತಿದೆ. ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ಬೇಗನೆ ಪ್ರಾರಂಭವಾದರೂ ಸಹ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆ ಬಂದಿರುವುದಿಲ್ಲ. ಜೂನ್ ಮಾಹೆಯಲ್ಲಿ 153 ಹೋಬಳಿಗಳು, ಜುಲೈ ಮಾಹೆಯಲ್ಲಿ 194 ಹೋಬಳಿಗಳಲ್ಲಿ ಮಳೆ ಕೊರತೆ ಕಂಡು ಬಂದಿತ್ತು. ಆಗಸ್ಟ್ ಮಾಹೆಯಲ್ಲಿ ರಾಜ್ಯದಾದ್ಯಂತ ಮಳೆಯ ತೀವ್ರ ಕೊರತೆ ಕಂಡುಬಂದಿದ್ದು ಸುಮಾರು 17 ಜಿಲ್ಲೆಗಳ 102 ತಾಲ್ಲೂಕುಗಳ 435 ಹೋಬಳಿಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿದೆ. ಇದರಿಂದಾಗಿ ಬಿತ್ತನೆಯಾಗಿರುವ ಕೃಷಿ ಬೆಳೆಗಳು ತೇವಾಂಶದ ಕೊರತೆ ಉಂಟಾಗಿತ್ತು. ಇದಲ್ಲದೆ 1ನೇ ಅಕ್ಟೋಬರ್‌ನಿಂದ 15ನೇ ಅಕ್ಟೋಬರ್‌ವರೆಗೆ ಸುಮಾರು 148 ತಾಲ್ಲೂಕುಗಳಲ್ಲಿ ಮಳೆ ಕೊರತೆ ಕಂಡು ಬಂದಿದೆ. ಇದು ಇರತಕ್ಕಂಥ ವಾಸ್ತವಂಶವಾಗಿದೆ. ಪ್ರಸಕ್ತ ಸಾಲಿನಲ್ಲಿ ಬರ ಪೀಡಿತ ಎಂದು ಘೋಷಣೆ ಮಾಡುವುದಾಗಿ ಸರ್ಕಾರದ ಎಸ್.ಡಿ.ಆರ್.ಎಫ್ ನಿಯಮದಂತೆ ಯಾವ ರೀತಿಯಾಗಿ ಮಾಡಬೇಕೆಂದು ಚರ್ಚಿಸಿ ಈಗಾಗಲೇ 98 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೇವೆ. ಇದರ ಬಗ್ಗೆ

ಕೇಂದ್ರ ಸರ್ಕಾರಕ್ಕೆ ಮನವಿಯನ್ನೂ ಸಹ ಕೊಟ್ಟಿದ್ದೇವೆ. ಪ್ರವಾಹ ಪೀಡಿತ ವಿಷಯಕ್ಕೂ ಸಂಬಂಧಪಟ್ಟಂತೆ ಸಹ ಮನವಿಯನ್ನು ಕೊಡಲಾಗಿತ್ತು. ಆದರೆ, ಈಗ ಬರ ಪೀಡಿತ ವಿಷಯಕ್ಕೂ ಸಂಬಂಧಪಟ್ಟಂತೆ ಮನವಿಯನ್ನು ಕೊಟ್ಟು ನಮಗೆ ಅಂದಾಜು ಸುಮಾರು 1719 ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಎಸ್.ಡಿ.ಆರ್.ಎಫ್. ನಿಯಮದಂತೆ ₹ 1014.15 ಕೋಟಿ ಆರ್ಥಿಕ ನೆರವನ್ನು ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಿದ್ದೇವೆ. ನಮ್ಮ ಮನವಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದ ಮೇಲೆ 8 ಜನರ ಕೇಂದ್ರ ಅಧ್ಯಯನದ ತಂಡವು ಬಂದು ಸುಮಾರು 15 ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಬಗ್ಗೆ ಅವಲೋಕನವನ್ನೂ ಸಹ ನಡೆಸಿದ್ದಾರೆ. ಹಾಗೆಯೇ ಈ ಬಗ್ಗೆ ಕೇಂದ್ರಕ್ಕೆ ವರದಿಯನ್ನೂ ಸಹ ಕೊಟ್ಟಿದ್ದಾರೆ. ನಾವು ಈಗ ಕೇಂದ್ರದಿಂದ ನೆರವನ್ನು ನಿರೀಕ್ಷಿಸುತ್ತಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದರೆ ಕೇಂದ್ರ ಸರ್ಕಾರದಿಂದ ಇದುವರೆಗೆ ಯಾವುದೇ ಹಣ ಬಿಡುಗಡೆ ಆಗದೇ ಇದ್ದರೂ ಕೂಡ, ರಾಜ್ಯ ಸರ್ಕಾರ ಎಸ್.ಡಿ.ಆರ್.ಎಫ್. ನಲ್ಲಿ ಸುಮಾರು 186.33 ಕೋಟಿ ರೂಪಾಯಿಯನ್ನು ಇಟ್ಟುಕೊಂಡಿದ್ದೇವೆ. ಅದು ಪ್ರವಾಹ, ಬರ, ಭೂಕಂಪ ಅಥವಾ ಬೇರೆ ಯಾವುದೇ ರೀತಿಯ natural calamities ಆದಂಥ ಸಂದರ್ಭದಲ್ಲಿ ಬಳಸಿಕೊಳ್ಳುವುದಕ್ಕೆ ನಮ್ಮ ಹತ್ತಿರ 186.33 ಕೋಟಿ ರೂಪಾಯಿ ಹಣ ಇದೆ. ಇದರಲ್ಲಿ 75% ನಷ್ಟು ಕೇಂದ್ರ ಸರ್ಕಾರದ್ದು ಮತ್ತು 25% ರಾಜ್ಯ ಸರ್ಕಾರ ಹಣ ಇದೆ. ಇದರ ಜೊತೆಗೆ ರಾಜ್ಯ ಸರ್ಕಾರದಿಂದ ನಮ್ಮ ಇಲಾಖೆ ಮುಖಾಂತರ 243.61 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಕುಡಿಯುವ ನೀರಿಗೆ ಯಾವ ರೀತಿಯಾಗಿ ಆದ್ಯತೆ ಕೊಡಬೇಕೆಂದು ಹೇಳಲಾಗಿದೆ. ಹಾಗೆಯೇ ಗೋಶಾಲೆಗಳಲ್ಲಿ ನಾವು ಹಣ ಕೊಟ್ಟಿದ್ದೇವೆ. ಅದರಲ್ಲಿ ಬರ ಪರಿಹಾರಕ್ಕೆ 105.66 ಕೋಟಿ ಮತ್ತು ಪ್ರವಾಹ ಪರಿಹಾರಕ್ಕೆ 243.61 ಕೋಟಿ ರೂಪಾಯಿಯಿಂದ ಕೊಟ್ಟಿದ್ದೇವೆ. ಇವತ್ತಿನ ದಿವಸ ಕುಡಿಯುವ ನೀರಿನ ಬಗ್ಗೆ ವಿಶೇಷವಾಗಿ ತಾವು ಪ್ರಸ್ತಾಪ ಮಾಡಿದ್ದೀರಿ. ನಾವು ಇತ್ತೀಚೆಗೆ ಜನವರಿ ತಿಂಗಳ 21ನೇ ತಾರೀಖಿನ ದಿವಸ ಹಾಗೂ ಈ ತಿಂಗಳಲ್ಲಿ ನಾವು ಮಾನ್ಯ

ಮುಖ್ಯಮಂತ್ರಿಗಳ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿ ಯಾವ ರೀತಿಯಲ್ಲಿ, ಅಂದರೆ ಹಿಂಗಾರು ಮಳೆ ವಿಫಲವಾದ ನಂತರ ಪರಿಸ್ಥಿತಿ ಹೇಗಿದೆ ಎಂದು ಮತ್ತು ಕುಡಿಯುವ ನೀರಿಗೆ ಏನಾದರೂ ತೊಂದರೆ ಇದೆಯೇ ಎಂದು ಮತ್ತು ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ಕೂಡ ಚರ್ಚೆ ಮಾಡಲಾಗಿದೆ. ಇದಾದನಂತರ ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಈ ಬಗ್ಗೆ ತಿಳಿಸಿದ್ದೇವೆ. ಹಣದ ಕೊರತೆ ನಮ್ಮಲ್ಲಿದೆ ಎಂದು ಯಾವುದೇ ಜಿಲ್ಲಾಧಿಕಾರಿಗಳು ನಮಗೆ ಹೇಳಿಲ್ಲ. ನಮಗೆ ಹೇಳಿಲ್ಲ. ಬರ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದು, ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇನ್‌ಚಾರ್ಜ್ ಸೆಕ್ರೆಟರಿಗಳ ಹತ್ತಿರ ಮಾತನಾಡುತ್ತಿಲ್ಲವೆಂದು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳಿದರು. ಇದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಕಾಲಕಾಲಕ್ಕೆ ಅವರನ್ನು ಕರೆಸಿ ಯಾವ್ಯಾವ ಜಿಲ್ಲೆಗೆ ಯಾರ್ಯಾರು ಉಸ್ತುವಾರಿ ಕಾರ್ಯದರ್ಶಿಗಳಾಗಿದ್ದಾರೆಯೋ ಅವರು ಆಯಾ ಜಿಲ್ಲೆಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕೆಂದು ಮತ್ತು ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಎಲ್ಲರ ಜೊತೆಯಲ್ಲಿ ಕೂಡ ಸಮಾಲೋಚನೆ ಮಾಡಬೇಕೆಂದು ಹಾಗೂ ಅಲ್ಲಿನ ಪರಿಸ್ಥಿತಿ ಹೇಗಿದೆ ಎಂದು ಮತ್ತು ಯಾವ ರೀತಿಯಾದ ಕಾಮಗಾರಿಯನ್ನು ತೆಗೆದುಕೊಂಡಿದ್ದಾರೆಂಬ ಬಗ್ಗೆ ಮತ್ತು ಅವುಗಳು ಯವ ರೀತಿಯಾಗಿ ನಡೆಯುತ್ತಿವೆ ಎಂದು ಮತ್ತೆ ಏನಾದರೂ ಕೊರತೆ ಇದೆಯೇ ಎಂಬ ಬಗ್ಗೆ ಅಲ್ಲಿಯೇ ಕುಳಿತು ಚರ್ಚೆ ಮಾಡಿದ್ದಾರೆ. ತಮಗೆಲ್ಲ ಗೊತ್ತಿರುವಂತೆ ಅಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಇರುತ್ತಾರೆ. ಆಯಾ ಜಿಲ್ಲೆಗಳಲ್ಲಿ ಏನಾಗುತ್ತಿದೆ ಎಂಬ ಬಗ್ಗೆ ಅಂದರೆ, ಜಿಲ್ಲೆಯಲ್ಲಿ ಏನು ಪರಿಸ್ಥಿತಿ ಇದೆ ಎಂಬ ಬಗ್ಗೆ ಮತ್ತು ಹಣದ ಕೊರತೆ ಇದೆಯೇ ಎಂಬ ಬಗ್ಗೆ, ಕೆಲಸ ಹೇಗೆ ಆಗುತ್ತಿದೆ ಎಂಬ ಬಗ್ಗೆ ಮತ್ತೆ ಡೆಪ್ಯುಟಿ ಜಿಲ್ಲೆಗಳಲ್ಲಿ

ಏನಾಗುತ್ತಿದೆ ಎಂಬ ಬಗ್ಗೆ ಅಂದರೆ, ಜಿಲ್ಲೆಯಲ್ಲಿ ಏನು ಪರಿಸ್ಥಿತಿ ಇದೆ ಎಂಬ ಬಗ್ಗೆ ಮತ್ತು ಹಣದ ಕೊರತೆ ಇದೆಯೇ ಎಂಬ ಬಗ್ಗೆ, ಕೆಲಸ ಹೇಗೆ ಆಗುತ್ತಿದೆ ಎಂಬ ಬಗ್ಗೆ ಮತ್ತೆ ಡೆಪ್ಯುಟಿ ಕಮೀಷನರ್‌ರವರಿಗೆ ಕೊಟ್ಟಿರುವ ಜವಾಬ್ದಾರಿ ಪ್ರಕಾರ ಅವರ ಕೆಲಸ ಮತ್ತು ಸಿಇಓ ಜೊತೆ ಅವರ co-ordination ಯಾವ ರೀತಿ ಇದೆ ಎಂದು ಮತ್ತು ಆರ್‌ಡಿಪಿಆರ್‌ನವರು ಕೆಲವು ಕೆಲಸಗಳನ್ನು ಯಾವ ರೀತಿಯಾಗಿ ಮಾಡಬೇಕೆಂದು ಮತ್ತು ನಾವು ಯಾವ ರೀತಿಯಾದ ಕೆಲಸಗಳನ್ನು ಮಾಡಬೇಕೆಂಬ ಬಗ್ಗೆ ಹಾಗೂ ಪಶುಸಂಗೋಪನೆ ಇಲಾಖೆಯವರು ಯಾವ ರೀತಿಯಾದ ಕೆಲಸಗಳನ್ನು ಮಾಡಬೇಕೆಂದು ಎಲ್ಲ ಇಲಾಖೆಗಳ ಜೊತೆ ಸಂಪರ್ಕ ಇಟ್ಟುಕೊಂಡು ನಮ್ಮ ಜೊತೆ ಕಾಲ ಕಾಲಕ್ಕೆ ಚರ್ಚೆ ಸಹ ಮಾಡುತ್ತಿರುತ್ತಾರೆ. ಹಾಗೆಯೇ, ತಮ್ಮಿಂದ ಬರತಕ್ಕಂಥ ಮನವಿ ಹಾಗೂ ಹವಾಮಾನ ಇಲಾಖೆಯ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ ಯಾವ ಪ್ರದೇಶಗಳನ್ನು ಬರಪೀಡಿತ ಎಂದು ಘೋಷಣೆ ಮಾಡಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಈಗ 98 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಇದರಲ್ಲಿ ಎಷ್ಟು ಹೋಬಳಿಗಳನ್ನು ಬರ ಪೀಡಿತ ಪ್ರದೇಶಗಳಲ್ಲಿ ಬರುತ್ತವೆಂದು ನಾವು ಮಾಡಿದ ಮೇಲೆ ಅವುಗಳಿಗೆ ವಿಶೇಷವಾದ ರೀತಿಯಲ್ಲಿ ಅದಕ್ಕೆ ಹಣ ಬಿಡುಗಡೆ ಮಾಡಬೇಕಾಗಿದೆ ಎಂಬ ಬಗ್ಗೆ ಕೂಡ ಚರ್ಚೆ ಮಾಡಲಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ, ಬರ ಪೀಡಿತ ಪ್ರದೇಶಗಳಾದ 98 ತಾಲ್ಲೂಕುಗಳಲ್ಲದೇ ರಾಜ್ಯದ ಯಾವುದೇ ಕಡೆ ಕೂಡ ನೀರಿಗೆ ಕೊರತೆ ಆಗದ ರೀತಿಯಲ್ಲಿ ಮತ್ತೆ ಅಲ್ಲಿ ಗೋಶಾಲೆಗಳು ಇರಬೇಕಾಗುತ್ತದೆಂದು ಮತ್ತು ನರೇಗಾ ಯೋಜನೆ ಅಡಿಯಲ್ಲಿ ಕೆಲಸ ಸಿಗುವಂತೆ ನೋಡಿಕೊಳ್ಳಬೇಕೆಂದು ಇಡೀ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಈಗ ವಿಶೇಷವಾಗಿ ಬರಪೀಡಿತ ಎಂದು ಘೋಷಣೆ ಮಾಡಿರುವಂಥ ಪ್ರದೇಶಗಳಿಗೆ ವಿಶೇಷವಾದಂಥ ಅನುದಾನ ಬರುತ್ತದೆ. ಆದ್ದರಿಂದ, ವಿಶೇಷ ಆಸಕ್ತಿ ವಹಿಸಿ ಕೆಲಸ ಮಾಡುವುದಕ್ಕೆ ಹೇಳಲಾಗಿದೆ. ಇದರ ಜೊತೆಯಲ್ಲಿ ಬೇರೆ ಕಡೆ ಕೂಡ ಯಾವುದೇ ರೀತಿಯಾದಂಥ ತೊಂದರೆ ಇಲ್ಲದ ರೀತಿಯಲ್ಲಿ ಪ್ರತಿಯೊಂದು ಕಡೆ ಕೂಡ

ಗಮನ ಕೊಟ್ಟು ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ರೀತಿಯಾಗಿ ನೀಗಿಸಬೇಕೆಂಬ ಬಗ್ಗೆ ಗಮನ ಹರಿಸಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಟಿ. ಕೃಷ್ಣಪ್ಪ:- ಮಾನ್ಯ ಸಚಿವರೆ, ನೀವು ಹೇಳುತ್ತಿರುವ ಯಾವುದೇ ವಿಚಾರದಲ್ಲಿ ಸತ್ಯ ಇಲ್ಲ. ದಯಮಾಡಿ ನಮ್ಮ ನೋವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಕಳೆದ ವರ್ಷದ ರಿಪೋರ್ಟ್ ಇಟ್ಟುಕೊಂಡು ತವು ಹೇಳುತ್ತಿದ್ದೀರಿ. ತಾವು ಈ ವರ್ಷದ ಬರಗಾಲದ ಬಗ್ಗೆ ಹೇಳಿ.

ಅಧ್ಯಕ್ಷರು:- ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಜವಾಬ್ದಾರಿ ಕೂಡ ಇದರ ಜೊತೆಗೆ ಇರುತ್ತದೆ. ಆದ್ದರಿಂದ, ನಿಮ್ಮ ತಾಲ್ಲೂಕುಗಳಲ್ಲಿ ನೀವು ಕೂಡ ಮಾತನಾಡಿ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ:- ನೀವು ಹಣ ಕೊಟ್ಟರೆ ನಾವೂ ಸಹ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿಸುತ್ತೇವೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಗೆ ನಮಗೆ ಬಂದಿರುವ ನೆರವು ಮತ್ತು ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿರುವುದು ಮತ್ತು ಆರ್‌ಡಿಪಿಆರ್ ಇಲಾಖೆಯಿಂದ ಎಷ್ಟು ಹಣ ಕೊಟ್ಟಿದ್ದೇವೆಂಬುದು ಹಾಗೆಯೇ ನಗರಾಭಿವೃದ್ಧಿ ಇಲಾಖೆಯಿಂದ ಎಷ್ಟು ಹಣ ಕೊಟ್ಟಿದೆ ಎಂದು ಮತ್ತೆ ನಮ್ಮ ಕಂದಾಯ ಇಲಾಖೆಯಿಂದ ಎಷ್ಟು ಹಣ ಕೊಟ್ಟಿದೆ ಎಂದು ಹಾಗೆಯೇ ನಮ್ಮ ಎಸ್.ಡಿ.ಆರ್.ಎಫ್.ನಿಂದ ಎಷ್ಟು ಹಣ ಇದೆ ಎಂದು ಮತ್ತು ಇದರಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆಂದು ಹಾಗೂ ಯಾವ ರೀತಿಯಾಗಿ ಕೆಲಸ ಮಾಡಬೇಕೆಂದು ಹೇಳಿದ್ದೇವೆಂದು ಮತ್ತು ಆರ್‌ಡಿಪಿಆರ್ ಇಲಾಖೆಯವರು ಏನು ಮಾಡಬೇಕೆಂದು ಹಾಗೂ ಕಂದಾಯ ಇಲಾಖೆಯವರು ಏನು ಮಾಡಬೇಕೆಂದು ಹಾಗೂ ಗೋಶಾಲೆಗಳಿಗೆ ಯಾರು ಏನು ಮಾಡಬೇಕೆಂದಿರುವ ಕೆಲಸಗಳ ಬಗ್ಗೆ ಎಲ್ಲ ಇಲಾಖೆಗಳ ಜೊತೆ

co-ordinate ಮಾಡಿ ಈ ಬಗ್ಗೆ ಅವರ ಜೊತೆ ಚರ್ಚೆ ಮಾಡಿ ಆಯಾಯ ಇಲಾಖೆಯ ಅಧಿಕಾರಿಗಳಿಗೆ ಇದರ ಜವಾಬ್ದಾರಿಯನ್ನು ಕೊಟ್ಟು ಹಾಗೆಯೇ ಡೆಪ್ಯುಟಿ ಕಮಿಷನರ್ ಮತ್ತು ಸಿಇಓ ರವರು ಸಹ ಆಗಾಗ್ಗೆ ಭೇಟಿ ಮಾಡಿ ಈ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ಹೆಚ್ಚು ಗಮನವನ್ನು ಕೊಟ್ಟು ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿದ್ದೇವೆ. ಕುಡಿಯುವ ನೀರಿಗೆ ಯಾರಿಗೂ ಕೂಡ ತೊಂದರೆ ಆಗಬರದು ಎಂದು ಹೇಳಿದ್ದೇವೆಂಬ ವಿಷಯ ತಮ್ಮೆಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ:- ಮಾನ್ಯ ಸಚಿವರೆ, ಒಂದು ನಿಮಿಷ, ನೀವು ಮೀಟಿಂಗ್ ಮಾಡಿಲ್ಲವೆಂದು ನಾವು ಪ್ರಸ್ತಾಪ ಮಾಡಿಲ್ಲ. ಹಾಗೆಯೇ, ಕಾರ್ಯದರ್ಶಿಗಳ ವರದಿ ತೆಗೆದುಕೊಂಡಿಲ್ಲವೆಂದು ನಾವು ಹೇಳುತ್ತಿಲ್ಲ. ನಾವು ಹೇಳುವುದು ಸತ್ಯವಲ್ಲವೆಂದರೆ, ನಮ್ಮ ಮಂಡ್ಯ ಜಿಲ್ಲೆಯ ಡಿ.ಸಿ.ಯವರಿಗೆ ತಾವು ಹೊರಕ್ಕೆ ಹೋಗಿ ದೂರವಾಣಿ ಮಾಡಿ ಕೇಳಿಕೊಂಡು ಬನ್ನಿ. ಒಂದು ಬೋರ್‌ವೆಲ್ ಕೊರೆಸುವುದಕ್ಕು ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಡಿ.ಸಿ. ಮತ್ತು ಸಿ.ಇ.ಓ. ಇಬ್ಬರೂ ಸಹ ನನ್ನ ಹತ್ತಿರ ಹೇಳಿದ್ದಾರೆ. ಬೋರ್‌ವೆಲ್ ಕೊರೆಸುವುದಕ್ಕೆ ದುಡ್ಡು ಇದೆ ಎಂದು ಅವರು ಹೇಳಿದರೆ ನಾನು ಎಂ.ಎಲ್.ಎ. ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ನಿಮ್ಮ ಬಗ್ಗೆ ನಮಗೆ ಗೌರವ ಇದೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಚಲುವರಾಯಸ್ವಾಮಿಯವರೇ, ಮಾನ್ಯ ಸಚಿವರು ಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಡಿ. ಆನಂತರ ತಾವುಗಳು ಮಾತನಾಡಿ.

(ಗೊಂದಲ)

ಶ್ರೀ ಎಂ. ಟಿ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪೇಪರ್‌ನಲ್ಲಿರುವ ಮಾಹಿತಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು:- ಮತ್ತೇನು ಹೇಳಬೇಕು? ಅವರು ಕುಣಿಯಬೇಕೆ? ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಸುಮಾರು 16.5 ಕೋಟಿ ರೂಪಾಯಿಯನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಹಾಗೆಯೇ ಜಿಲ್ಲಾಧಿಕಾರಿಗಳ ಪಿ.ಡಿ. ಅಕೌಂಟ್‌ನಲ್ಲಿ ಎಷ್ಟು ಹಣ ಇದೆ ಎಂಬ ಮಾಹಿತಿ ಪಡೆದುಕೊಂಡಿದ್ದೇವೆ. ಇವತ್ತು ಕೂಡ ಅಲ್ಲಿ ಹಣ ಇದೆ. ಹಾಗೆಯೇ ಹೆಚ್ಚು ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಯಾವುದೇ ರೀತಿಯ ಹಣದ ತೊಂದರೆ ಇಲ್ಲ. ಆದರೆ, ತಾವು ಹೇಳಿರುವಂಥ ವಿಚಾರದ ಬಗ್ಗೆ ನಾನು ಗಂಭೀರವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ:- ದುಡ್ಡು ಇದ್ದ ಮೇಲೆ ಬೋರ್‌ವೆಲ್ ಕೊರೆಸುವುದಕ್ಕೆ ದುಡ್ಡು ಇಲ್ಲವೆಂದು ಹೇಗೆ ಹೇಳಿದರು?

ಅಧ್ಯಕ್ಷರು:- ದುಡ್ಡು ಇಲ್ಲವೆಂದು ನಿಮಗೆ ಯಾರು ಹೇಳಿದರು?

ಶ್ರೀ ಎನ್. ಚಲುವರಾಯಸ್ವಾಮಿ:- ದುಡ್ಡು ಇಲ್ಲವೆಂದು ಜಿಲ್ಲಾಧಿಕಾರಿಗಳು ಹೇಳಿದರು?

ಅಧ್ಯಕ್ಷರು: ಈ ಬಗ್ಗೆ ನೋಟ್ ಮಾಡಿಕೊಳ್ಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಂಡ್ಯ ಜಿಲ್ಲಾಧಿಕಾರಿಗಳು ಹೇಳಿದ್ದಾರೆಯೇ?

ಶ್ರೀ ಎನ್. ಚಲುವರಾಯಸ್ವಾಮಿ:- ಬೋರ್ ವೆಲ್ ಕೊರೆಯುವುದಕ್ಕೆ ದುಡ್ಡು ಇಲ್ಲವೆಂದು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಸಿ.ಇ.ಓ.ರವರು ಹೇಳಿದ್ದಾರೆ.

ಅಧ್ಯಕ್ಷರು:- ಆಯಿತು, ಈ ಬಗ್ಗೆ ತನಿಖೆ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಮ್ಮ ಕಾರ್ಯದರ್ಶಿಗಳು video conference ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದ್ದಾರೆ. .. ನಾನು ಹೇಳುವುದನ್ನು ಮೊದಲು ಕೇಳಿ. ಆನಂತರ ತಾವು ಮಾತನಾಡಿ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ತಾವು video conference ಮಾಡುವಂಥ ಸಂದರ್ಭದಲ್ಲಿ ನಮ್ಮನ್ನು ಕರೆದು ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಹಣ ಇಲ್ಲವೆಂದು ಹೇಳಿದ್ದಾರೆಂದು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾನು ಪರಿಶೀಲಿಸಿ ತಕ್ಷಣ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ:- Video conference ಮಾಡುವಾಗ ಶಾಸಕರುಗಳನ್ನು ಅಲ್ಲಿ ಕುಳ್ಳಿರಿಸಿಕೊಂಡರೆ ಒಳ್ಳೆಯದು. ನಿಮ್ಮ ಅಧಿಕಾರಿಗಳ ಕತೆ ಏನೆಂಬುದನ್ನು ನಾವು ಆಗ ಹೇಳುತ್ತೇವೆ. ದಯಮಾಡಿ ಕೇಳಿ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವ ಜಿಲ್ಲಾಧಿಕಾರಿಗಳು ಬೋರ್‌ವೆಲ್ ಕೊರೆಯುವುದಕ್ಕೆ ಹಣದ ಕೊರತೆ ಇದೆ ಎಂದು ಹೇಳುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಹೇಳಿದರೆ ನಾನು ತಕ್ಷಣ ಅದನ್ನು ಪರಿಶೀಲಿಸಿ ನಮ್ಮ ಅಧಿಕಾರಿಗಳು ಅಥವಾ ನಾವೇ ಹೋಗಿ ಜಿಲ್ಲಾಧಿಕಾರಿಗಳನ್ನು ಕರೆಸಿ ಕೇಳುತ್ತೇವೆ. ಈ ರೀತಿ ಆಗಿದೆ ಎಂದು ಹೇಳಿ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆಂದು ಅವರಿಗೆ ಹೇಳುತ್ತೇನೆ, ಈ ರೀತಿ ಏನಾದರೂ ಆಗಿದ್ದರೆ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ಅದರ ಬಗ್ಗೆ ಏನೂ ಯೋಚನೆ ಮಾಡಬೇಡಿ.

ಅಧ್ಯಕ್ಷರು: ನಾಳೆ ಅವರನ್ನು ಕರೆಸಿ ಕೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಂಡ್ಯ ಜಿಲ್ಲಾಧಿಕಾರಿಗಳ ಹತ್ತಿರ 6.61 ಕೋಟಿ ರೂ.ಗಳು ಇದೆ.

ಅಧ್ಯಕ್ಷರು: Issue him a notice.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ನಾಗಮಂಗಲ ಕ್ಷೇತ್ರಕ್ಕೆ 10 ಲಕ್ಷ ರೂ.ಗಳು ಇದೆ. ಅವರಿಗೆ ಆ ರೀತಿ ಹೇಳಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ:- ಬೋರ್‌ವೆಲ್ ತೆಗೆಯಲಿಕ್ಕೆ ಆ ಹಣ ಅಲ್ಲ, ಸರ್. ಆ ಹಣದಲ್ಲಿ ಬೋರ್‌ವೆಲ್ ತೆಗೆಯುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು: ಕುಡಿಯುವ ನೀರು ಎಂದರೆ ಏನ್ರಿ? ನೋಡೋಣ, ಹೇಳಿ ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ:- ನೀವು ಅವರನ್ನು ಕರೆಸಿ ಮಾತನಾಡಿ. ನಿಮ್ಮ ಬಗ್ಗೆ ನಮಗೇನೂ ಬೇಜಾರಿಲ್ಲ. ಇಲ್ಲಿ ಮಾತನಾಡಬೇಕೆಂದು ನಮಗೇನೂ ಚಪಲವಿಲ್ಲ, God promise.

ಅಧ್ಯಕ್ಷರು: ಆಯಿತು. ಬರ ಪರಿಹಾರದ ಸಲುವಾಗಿ ದುಡ್ಡು ಇದೆ ಎಂದು ಹೇಳಿದ್ದಾರೆ. ನಿಮ್ಮ ಆಪಾದನೆ ಏನಿದೆ, ಅದರ ಬಗ್ಗೆ ಅವರನ್ನು ಕರೆಸಿ warn ಮಾಡುತ್ತಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಈ ಸದನದ ಗಮನಕ್ಕೆ ತರಬೇಕಾಗಿತ್ತು. ಬರ ಪರಿಸ್ಥಿತಿಯನ್ನು ಎದುರಿಸತಕ್ಕಂಥ ರೀತಿಯಲ್ಲಿ ನಾವು ಏನು ಕ್ರಮ ಕೈಗೊಂಡಿದ್ದೇವೆ ಎನ್ನುವುದನ್ನು ತಮಗೆ ತಿಳಿಸಿ ಹೇಳುತ್ತೇನೆ. ರಾಜ್ಯದ ಒಟ್ಟು 25 ಜಿಲ್ಲೆಗಳಲ್ಲಿ 98 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಮಾನದಂಡದ ಪ್ರಕಾರ ನಾಗಮಂಗಲ ಕೂಡ ಬಂದಿರುವುದರಿಂದ ನಾವು ಲಿಸ್ಟ್‌ನಲ್ಲಿ ಸೇರಿಸಿರುತ್ತೇವೆ. ಕಂದಾಯ ಇಲಾಖೆಯ SDRF ನಿಧಿಯಿಂದ ತುರ್ತು ಕುಡಿಯುವ ನೀರು ಸರಬರಾಜು ಮತ್ತು ಗೋಶಾಲೆ ನಿರ್ವಹಣೆಗೆ 105.66 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇದು ಕುಡಿಯುವ

ನೀರು ಹಾಗೂ ಗೋಶಾಲೆ ನಿರ್ವಹಣೆಗೆ. ರಾಜ್ಯದಾದ್ಯಂತ 80 ಗ್ರಾಮಗಳಿಗೆ 89 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈಗ ಎಲ್ಲೆಲ್ಲಿ ತೊಂದರೆ ಇದೆ, ಇವತ್ತು ಅಂತರ್ಜಲ ಕುಸಿದು ಬೋರ್‌ವೆಲ್ ಮೂಲಕ ಕೂಡ ನೀರು ಬರುತ್ತಿಲ್ಲ, ಎಲ್ಲಿ ನೀರು ಬರುತ್ತಿಲ್ಲ ಅಂತಹ ಕಡೆ ನಾವು ಸುಮಾರು 89 ಟ್ಯಾಂಕರ್‌ಗಳ ಮೂಲಕ ಇವತ್ತು ನೀರನ್ನು 80 ಗ್ರಾಮಗಳಿಗೆ ಕೊಡುತ್ತಿದ್ದೇವೆ. ರಾಜ್ಯದಾದ್ಯಂತ ಏಪ್ರಿಲ್‌ನಿಂದ ಇಲ್ಲಿಯವರೆಗೆ 19 ಗೋಶಾಲೆಗಳನ್ನು ತೆರೆಯಲಾಗಿದ್ದು ಚಿತ್ರದುರ್ಗ ಜಿಲ್ಲಿಯಲ್ಲಿ ಒಂದು ಗೋಶಾಲೆ ಮಾತ್ರ ನಡೆಯುತ್ತಿದೆ. ಸಾಕಷ್ಟು ಮೇವು ಇರುವ 18 ಕಡೆ ಗೋಶಾಲೆಗಳನ್ನು ನಿಲ್ಲಿಸಿರುತ್ತೇವೆ. ನನಗೆ ಗೊತ್ತಿರುವ ಪ್ರಕಾರ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನಲ್ಲಿ ಒಂದು ಗೋಶಾಲೆ ಮಾತ್ರ ನಡೆಯುತ್ತಿದೆ. ರಾಜ್ಯದಾದ್ಯಂತ ಪಶು ಸಂಗೋಪನೆ ಇಲಾಖೆಯ ಸುಪರ್ದಿಯಲ್ಲಿರುವಂಥ ಫಾರಂಗಳಲ್ಲಿ ಮೇವು ಬೆಳೆಯಲು ಮೇವಿನ ಮಿನಿ ಕಿಟ್ ಖರೀದಿಸಲು 5 ಕೋಟಿ ರೂ.ಗಳ ಅನುದಾನವನ್ನು ಪಶು ಸಂಗೋಪನೆ ಇಲಾಖೆಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಕೆಲವು ಜಿಲ್ಲೆಗಳಲ್ಲಿ ಮೇವಿನ ದಾಸ್ತಾನು ಕಡಿಮೆ ಇದ್ದು, ಮುಂದಿನ ಜನವರಿಯ ನಂತರ ತೀವ್ರ ಕೊರತೆ ಕಂಡು ಬರುತ್ತದೆ. ಆದುದರಿಂದ ಪ್ರಸ್ತುತ ಮೇವು ಹೆಚ್ಚು ಇರುವ ಜಿಲ್ಲೆಗಳಿಂದ ಕಡಿಮೆ ದಾಸ್ತಾನು ಇರುವ ಜಿಲ್ಲೆಗಳಿಗೆ ವರ್ಗಾಯಿಸಲು ಮುಂಜಾಗ್ರತೆಯಾಗಿ ಈಗಾಗಲೇ ಸೂಚನೆಯನ್ನು ನೀಡಲಾಗಿದೆ. ಈಗ ನಾವು ತೆಗೆದುಕೊಂಡಿರುವಂಥ ಕ್ರಮಗಳು, ರಾಜ್ಯದಲ್ಲಿ ಲಭ್ಯ ಇರುವ ಜಲಮೂಲಗಳನ್ನು ಸಂರಕ್ಷಿಸುವುದು, ಇದನ್ನು ನಾವು ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಆಳವಾಗಿ ಡಿಸ್‌ಕಸ್ ಮಾಡಿ ತೆಗೆದುಕೊಂಡಿರುವಂಥ ತೀರ್ಮಾನ. ಅದನ್ನು ಸರ್ಕಾರಕ್ಕೆ ತಿಳಿಸಿದ್ದೇವೆ. ರಾಜ್ಯದಲ್ಲಿ ಲಭ್ಯವಿರುವ ಜಲಮೂಲಗಳನ್ನು ಸಂರಕ್ಷಿಸಿ ಕೆರೆ ಕಟ್ಟೆಗಳಲ್ಲಿ ಲಭ್ಯ ಇರುವ ನೀರನ್ನು ಕೇವಲ ಕುಡಿಯುವ ನೀರಿಗಾಗಿ ಮಾತ್ರ ಬಳಸಿಕೊಳ್ಳಬೇಕೆಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಅಂತರ್ಜಲ ಕುಸಿಯುತ್ತಿದೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸಮಸ್ಯಾತ್ಮಕ

ಪ್ರದೇಶಗಳ. ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ 24X7 ಅವಧಿಯಲ್ಲಿ control room ಗಳನ್ನು ತೆಗೆದು ಕಾರ್ಯನಿರ್ವಹಿಸಲು ಮತ್ತು ದೂರುಗಳನ್ನು ಸ್ವೀಕರಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. 24 ಗಂಟೆ ಇಲ್ಲವೆಂದು ನೀವು ಹೇಳಬಹುದು. ಅದು ಇದೆಯೇ? ನೀವು ಒಂದು ಸಲ ಅದನ್ನು ನೋಡಿ ಬಂದು ನೀವು ನಮಗೆ ಹೇಳಿ. ನಿಮಗೆ ನೋಡುವುದಕ್ಕೆ ಅವಕಾಶ ಇದೆ. ನೋಡಿ ಬಮದು ನೀವು ಸದನದಲ್ಲಿ ಆಗುತ್ತದೋ ಇಲ್ಲವೋ ಎನ್ನುವುದನ್ನು ನೀವು ತಿಳಿಸಬಹುದು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ವಾರ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸಭೆ ನಡೆಸಿ ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸಲು ಸೂಚಿಸಲಾಗಿದೆ. ಇಬ್ಬರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಆಗಿರುತ್ತದೆ, ಆರ್.ಡಿ.ಪಿ.ಆರ್. ಇಲಾಖೆಯಿಂದ ತುರ್ತು ಕುಡಿಯುವ ನೀರಿನ ಸರಬರಾಜಿಗೆ 62.06 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆಯಿಂದ ತುರ್ತು ಕುಡಿಯುವ ನೀರಿನ ಸರಬರಾಜಿಗೆ 40 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರದಿಂದ ಇದುವರೆಗೆ 207.72 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಂದಾಯ ಮತ್ತು ನಗರಾಭಿವೃದ್ಧಿ ಇಲಾಖೆಗೆ ಹಣ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ಹಣದ ನಿರೀಕ್ಷೆಯನ್ನು ಮಾಡದೆ ಬರ ಪರಿಹಾರಕ್ಕೆ 105.66 ಕೋಟಿ ರೂ.ಗಳ ಅನುದಾನ ಖರ್ಚು ಮಾಡಲಾಗಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯನ್ನೂ ಕೂಡ ನಡೆಸಿ ಬಹಳ ಎಚ್ಚರಿಕೆಯಿಂದ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಮುಂದಿನ ಬೇಸಿಗೆಯ ಋತುವಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಲಿದ್ದು ಇದಕ್ಕಾಗಿ ಜಿಲ್ಲಾಧಿಕಾರಿಗಳು ಬರ ನಿರ್ವಹಣೆಗೆ ಕ್ರಿಯಾ ಯೋಜನೆ ರೂಪಿಸುವಂತೆ ತಿಳಿಸಿದ್ದಾರೆ. ಇಷ್ಟೆಲ್ಲಾ

ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳೂ ಕೂಡ ಪ್ರತಿ ಸೋಮವಾರ ಬೆಳಗ್ಗೆ ಒಂದು ಗಂಟೆ ಕಾಲ ನೀವು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಈ ಬರ ಪೀಡಿತ ಪ್ರದೇಶಗಳಲ್ಲಿ ಏನೇನು ತೊಂದರೆ ಇದೆ ಎನ್ನತಕ್ಕಂಥದ್ದರ ಬಗ್ಗೆ ನೀವು ಪ್ರತಿ ವಾರ ಕುಳಿತು ಕಡ್ಡಾಯವಾಗಿ ಚರ್ಚೆ ಮಾಡಿ ಯಾವ್ಯಾವ ರೀತಿಯಿಂದ ಸರ್ಕಾರದಿಂದ ನಿಮಗೆ ನೆರವು ಬಂದಿದೆ, ಯಾವ ರೀತಿಯಾಗಿ ಕಾಮಗಾರಿಗಳನ್ನು ಹಾಕಿದ್ದೇವೆ, ಅದು ಯಾವ ರೀತಿಯಲ್ಲಿ ಬೆಳವಣಿಗೆ ಆಗುತ್ತಿದೆ ಎನ್ನುವುದರ ಬಗ್ಗೆ ನೀವು ಚರ್ಚೆ ಮಾಡಿ ನಮಗೆ ವರದಿ ಕೊಡಬೇಕು ಎನ್ನುವುದನ್ನು ಕೂಡ ನಾವು ತಿಳಿಸಿದ್ದೇವೆ. ತಮಗೆ ನಾನು ಹೇಳಿದೆ, ಉಸ್ತುವಾರಿ ಕಾರ್ಯದರ್ಶಿಗಳು ಮತ್ತೊಂದು ಸಲ ಅವರಿಗೆ ಸಭೆ ನಡೆಸಬೇಕೆಂದು ಹೇಳಿರುತ್ತೇವೆ. ಕ್ಯಾಬಿನೆಟ್ ಮುಂದೆ ಬರ ಪೀಡಿತ ಪದ್ರೇಶ ಎಂದು ಇನ್ನು ಕೆಲವು ತಾಲ್ಲೂಕುಗಳನ್ನು ಸೇರಿಸಬೇಕೆಂದು ಬಮದಿದೆ. ಅದರ ಬಗ್ಗೆ ಕೂಡ ಚರ್ಚೆ ಮಾಡುತ್ತಿದ್ದೇವೆ. ಕೇಂದ್ರದ ಹಣವನ್ನೂ ಕೂಡ ಇವತ್ತು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಹೀಗಾಗಿ ಇದರ ಬಗ್ಗೆ ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಂಡು ನಿಮ್ಮೆಲ್ಲರ ಸಹಕಾರದಿಂದ ನಾವು ಹೇಗೆ ಬಗರೆಹರಿಸಬೇಕು, ಎಂಬುದರ ಬಗ್ಗೆ ಗಮನ ಹರಿಸುತ್ತೇವೆ. ನಮಗೆ ಗೊತ್ತಿದೆ, ಮುಂದೆ ಬರತಕ್ಕಂಥ ದಿವಸಗಳಲ್ಲಿ ನಮಗೆ ಮಳೆಯ ಕೊರತೆ ಆಗತಕ್ಕಂಥದ್ದು ಇದೆ. ಮುನ್ನೆಚ್ಚರಿಕೆಯ ಕ್ರಮವಾಗಿ ಕುಡಿಯುವ ನೀರಿಗೆ ಸಮಸ್ಯೆ ಆಗದೆ ಇರತಕ್ಕಂಥ ರೀತಿಯಲ್ಲಿ ಮತ್ತು ಮುಂಜಾಗ್ರತೆಯಾಗಿ ಯಾವ ರೀತಿಯಲ್ಲಿ ಗೋಶಾಲೆಗಳನ್ನು ಮಾಡಬೇಕು, ಅವುಗಳಿಗೆ ಯಾವ ರೀತಿಯಾದ ಕಿಟ್‌ಗಳನ್ನು ಮತ್ತು ಮುಂತಾದವುಗಳನ್ನು ಕೊಡಬೇಕು, ಗ್ರಾಮೀಣಾಭಿವೃದ್ಧಿ ಇಲಾಖೆಯ ವತಿಯಿಂದ ಬರೇಗಾದಲ್ಲಿ ಯಾವ ರೀತಿಯಾಗಿ ಕೈ ಕೆಲಸಗಳನ್ನು ಕೊಡಬೇಕು ಎನ್ನುವ ರೀತಿಯಲ್ಲಿ ನಾವಿಬ್ಬರೂ ಕೂಡ ಚರ್ಚೆಯನ್ನು ಮಾಡುತ್ತಿದ್ದೇವೆ. ಬಹಳ ಗಂಭೀರವಾಗಿ ಇದನ್ನು ತೆಗೆದುಕೊಂಡು ನಿಮ್ಮ ತಾಲ್ಲೂಕಿನಲ್ಲಿ ನಿಮ್ಮ ಜಿಲ್ಲೆಯಲ್ಲಿ ಏನೇ ಸಮಸ್ಯೆಗಳು ಇದ್ದರೂ ಕೂಡ ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ, ಅದರ ಬಗ್ಗೆ ನಾವು ಆಸಕ್ತಿಯನ್ನು ವಹಿಸಿ ಅದೆಲ್ಲವನ್ನೂ ಸರಿಪಡಿಸುತ್ತೇವೆ. ಈ ಬರ

ಪರಿಸ್ಥಿತಿಯನ್ನು ನಿಭಾಯಿಸತಕ್ಕಂಥ ದಿಕ್ಕಿನಲ್ಲಿ ನಮ್ಮ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಸರ್ಕಾರ ಬಂದ ಮೇಲೆ ಏನು ಭರವಸೆ ಕೊಟ್ಟಿದ್ದೇವೋ ಅದನ್ನು ಅನುಸರಿಸಿ, ಇವತ್ತು ಕೂಡ ನಾವು ಮಾಡುತ್ತಿದ್ದೇವೆ. ಈ ಬಜೆಟ್‌ನಲ್ಲಿ ಸಹ ಮುಖ್ಯಮಂತ್ರಿಗಳು ಆಯಾ ಇಲಾಖೆಗೆ ಹೆಚ್ಚಿನ ಹಣ ಇಟ್ಟು, ಗ್ರಾಮೀಣಾಭಿವೃದ್ಧಿ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು ಮತ್ತು ನಗರಾಭಿವೃದ್ಧಿ ಇಲಾಖೆ ಇರಬಹುದು, ಆ ಕಡೆ ನಾವು ಹೆಚ್ಚು ಗಮನವನ್ನು ಕೊಟ್ಟು ಹಣದ ಕೊರತೆ ಇಲ್ಲದ ರೀತಿಯಲ್ಲಿ ಕೇಂದ್ರ ಸರ್ಕಾರದ ನೆರವು ಬರುತ್ತದೆ, ಆ ಹಣ ಬರುವವರಿಗೆ ನಾವು ನಿರೀಕ್ಷೆ ಮಾಡದೆ ಎಲ್ಲವನ್ನು ಮಾಡುತ್ತಿದ್ದೇವೆ. ನಾವು war-footingನಲ್ಲಿ ತೆಗೆದುಕೊಂಡಿದ್ದೇವೆ, ಆದರೆ ಅದು ನಿಮಗೆ ಕಾಣುತ್ತಿಲ್ಲ. ನನಗೆ ಗೊತ್ತಾಗುತ್ತಿದೆ. ಮಾನ್ಯ ಜಗದೀಶ್ ಶೆಟ್ಟರ್‌ವರು ಬರಬೇಕಾಗಿತ್ತು, ಅವರು ಆರ್.ಡಿ.ಪಿ.ಆರ್. ಮತ್ತು ಕಂದಾಯ ಸಚಿವರಾಗಿದ್ದವರು, ನಾವು ಆ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಪ್ರಾಮಾಣಿಕವಾಗಿ ಈ ಸಮಸ್ಯೆಯನ್ನು ಬಗೆಹರಿಸುವಂಥ ದಿಕ್ಕಿನಲ್ಲಿ ಖಂಡಿತವಾಗಿ ನಾವು ಪ್ರಯತ್ನವನ್ನು ಮಾಡುತ್ತೇವೆ. ಇವತ್ತು ನಿಮ್ಮೆಲ್ಲರ ಸಹಕಾರ ಬೇಕಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಿಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ವಿವರವಾಗಿ ಹೇಳಿದ್ದಾರೆ. ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಏನಾದರೂ ತೊಂದರೆಗಳು ಕಂಡು ಬಂದರೆ ಇನ್ನು 4–5 ದಿವಸ ಸದನ ನಡೆಯುತ್ತದೆ ಪ್ರಸ್ತಾಪ ಮಾಡಿ. ಏನೂ ತೊಂದರೆ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇಂದ್ರ ಸರ್ಕಾರದಿಂದ ಇನ್ನುವರೆಗೆ ಏನೂ ಹಣ ಬರಲಿಲ್ಲ.

ಅಧ್ಯಕ್ಷರು: ಅದು ಬೇರೆ ಮಾತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವರು ಕೇಂದ್ರ ಸರ್ಕಾರದಿಂದ ಹಣ ಬರುವ ರೀತಿಯಲ್ಲಿ ನೋಡಿಕೊಳ್ಳಬೇಕು. ತಾವು ಒಂದು ಸಲ ನೆರವು ಬೇಕು

ಎಂದು ಒಂದು ಮನವಿಯನ್ನೂ ಕೂಡ ಕೊಟ್ಟಿದ್ದೀರಿ. ಇನ್ನು ಏನೇನು ತೊಂದರೆ ಎನ್ನುವುದನ್ನು ತಿಳಿಸಿ ಕೇಂದ್ರ ಸರ್ಕಾರಕ್ಕೆ ರಿವೈಸ್ಡ್ ಅಂದಾಜು ಪಟ್ಟಿ ಕೊಟ್ಟು ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಿಂದ ಹಣವನ್ನು ತರಿಸಬೇಕು.

ಅಧ್ಯಕ್ಷರು: ಅವರು ನೋಡಿಕೊಳ್ಳುತ್ತಾರೆ ಬಿಡಿ, ಕೇಂದ್ರದ ಬಗ್ಗೆ ಇಟ್ಟುಕೊಂಡು ನಿಮಗೆ ಏನಾಗಬೇಕಾಗಿದೆ? ರಾಜ್ಯ ಸರ್ಕಾರ ಇದೆ, ಅವರಿಗೆ ಜವಾಬ್ದಾರಿ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹಣ ಅಲ್ಲಿಂದ ಬರಬೇಕು, ಸರ್.

ಅಧ್ಯಕ್ಷರು: ಬರದಿದ್ದರೂ ಮಾಡುತ್ತೇವೆಂದು ಅವರು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಎಲ್ಲಿದೆ ಹಣ? ಎಸ್‌ಡಿಆರ್‌ಎಫ್ ನಿಂದ ನಮಗೆ ಹಣ ಬರಬೇಕು. ಇನ್ನು ಎಲ್ಲಿಂದಲೂ ಕೂಡ ಅವರು ಹಣ ಕೊಡುವುದಿಲ್ಲ.

ಅಧ್ಯಕ್ಷರು: ಇನ್ನೂ ಬೇರೆ ವಿಷಯಗಳು ಇವೆ. ಚಲುವರಾಯಸ್ವಾಮಿಯವರೆ, ಏನು ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಾಕಷ್ಟು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿರುತ್ತಾರೆ. ನೀವು ಹೇಳಿದ ಹಾಗೆ ನಾವು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿರುವುದಕ್ಕೆ ನಮಗೇನೂ ಬೇಸರ ಇಲ್ಲ. ನಮಗೆ ಸಮಾಧಾನ ಇದೆ. ನಾನು ನಿಮಗೆ particular ಆಗಿ request ಮಾಡುತ್ತಿದ್ದೇನೆ. ಕುಡಿಯುವ ನೀರಿನ ಬಗ್ಗೆ ನಮ್ಮ ಅಧಿಕಾರಿಗಳ ಹತ್ತಿರ ನಾವು ಮಾತನಾಡಿದಾಗ ಕೆಲವು communication gap ಇರಬಹುದು, ಕೆಲವು ಕಾನೂನಿನ ತೊಡಕು ಇರಬಹುದು, ಬೋರ್‌ವೆಲ್ ಹಾಕುವುದಕ್ಕೆ ನಮ್ಮ ಹತ್ತಿರ ದುಡ್ಡು ಇಲ್ಲವೆಂದು specific ಆಗಿ ನಮ್ಮ ಹತ್ತಿರ ದುಡ್ಡು ಇಲ್ಲವೆಂದು specific ಆಗಿ ನಮ್ಮ ಹತ್ತಿರ ಹೇಳಿದ್ದಾರೆ. ಸ್ಕೀಂ ನಲ್ಲಿ drop ಆಗಿರುವುದು ಇರಬಹುದು, ದಯಮಾಡಿ ನೀವು ಈ ಸದನ ಮುಗಿದ ಮೇಲೆ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ

ಮತ್ತು ಸಿ.ಇ.ಓ.ಗಳಿಗೆ ಫೋನ್ ಮಾಡಿ, ನೀವು ನನ್ನ ಹೆಸರನ್ನು ಬೇಕಾದರೆ ರೆಫರ್ ಮಾಡಿ. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಸ್ಯೆ ಇದೆ. ನಿಮ್ಮ secretary ಯವರಿಗೆ ಹೇಳಿ. ಎಲ್ಲಾ ಜಿಲ್ಲಾಧಿಕಾರಿಗಳಿಗೂ circular ಕೊಡಿ. ಹೊಸ ಬೋರ್‌ವೆಲ್ drop ಆದವುಗಳಿಗೆ, ಸ್ಕೀಮ್‌ನಲ್ಲಿ fail, ಆದವುಗಳಿಗೆ, ಹೊಸದಾಗಿ ಬೋರ್‌ವೆಲ್ ಕೊರೆಸುವುದಕ್ಕೆ ಹಣವನ್ನು ಉಪಯೋಗಿಸಿ ಕೊರೆಯಿರಿ ಎಂದು ಹೇಳಿ. ನಮಗೇನು ತೊಂದರೆ ಇಲ್ಲ. ತಮಗೆ ಧನ್ಯವಾದಗಳು.

(ಗೊಂದಲ)

ಅಧ್ಯಕ್ಷರು: ಸಾಕು, ಇದರ ಬಗ್ಗೆ detail ಆಗಿ ಚರ್ಚೆ ಆಗಿದೆ.

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ವಾಸ್ತವಿಕ ಪರಿಸ್ಥಿತಿಯೇ ಬೇರೆ ಇದೆ. ಮಾನ್ಯ ಸಚಿವರು ಹೇಳುವುದು ಬೇರೆ ಇದೆ.

(ಗೊಂದಲ)

ಅಧ್ಯಕ್ಷರು: ಅವರ ಕ್ಷೇತ್ರದಲ್ಲಿ ಕೆಲವು ಅಧಿಕಾರಿಗಳು ಸ್ವಲ್ಪ ನುಣಚಿಕೊಂಡು ಹೇಳುವಂತಹ ಸಂಭವ ಇರುತ್ತದೆ. ಅಧಿಕಾರಿಗಳಿಗೆ warn ಮಾಡಿ. ದುಡ್ಡು ಎಷ್ಟೇ ಖರ್ಚು ಆಗಲಿ, ಏನೇ ಆಗಲಿ, ಕುಡಿಯುವ ನೀರಿನ ವಿಚಾರದಲ್ಲಿ ತೊಂದರೆ ಆಗಬಾರದು.

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಳೆದ ಆಗಸ್ಟ್ ತಿಂಗಳಿನಲ್ಲಿ ನಾವು ಒಂದು Task-force Committee meeting ಮಾಡಿ 16 bore points ಅನ್ನು ಶಿಫಾರಸ್ಸು ಮಾಡಿ ಕಳುಹಿಸಿದ್ದೇವೆ. ಅದು ಕೊನೆಯವರೆಗೂ ಅಪ್ರೂವ್ ಆಗಲಿಲ್ಲ. ಇವತ್ತು ಕೇಳಿದರೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಅನುಭವ ಹೇಳುತ್ತಿದ್ದೇನೆ. ನಾನು ಸುಳ್ಳು ಹೇಳುತ್ತಿಲ್ಲ.

ಅಧ್ಯಕ್ಷರು: ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಯಾರು ಹೇಳಿದರು?

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಈ ರೀತಿ ನನ್ನ ಅನುಭವವನ್ನು ಹೇಳುತ್ತಿದ್ದೇನೆ. 16 bore points ಮಂಜೂರು ಆಗಲಿಲ್ಲ,

ಶ್ರೀ ವಿ. ಶ್ರೀನಿವಾಸ ಪ್ರಸಾದ್(ಕಂದಾಯ ಸಚಿವರು): ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕರೆದಂತಹ ಸಭೆಯಲ್ಲಿ ನಾನೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಇದರ ಹಿಂದೆ ನಾನು ಏನು ಯೋಚನೆ ಮಾಡಿದೆ ಎಂದರೆ, ವಿಭಾಗವಾರು ನಮ್ಮಲ್ಲಿ ನಾಲ್ಕು ಡಿವಿಷನ್‌ಗಳು, Regions ಇವೆ. Regions ಮಟ್ಟದಲ್ಲಿ ಕೂಡ ಸಭೆ ನಡೆಸಿ, Regions ಮಟ್ಟದಲ್ಲಿಯೂ ಮಾಡಬೇಕೆಂದು ಪ್ರಾರಂಭ ಮಾಡಿದೆ. ಮೈಸೂರಿನಲ್ಲಿ ಮಾಡುವುದಕ್ಕೆ ಆಗಲಿಲ್ಲ. ಬೆಂಗಳೂರು ವಿಭಾಗದಲ್ಲಿ ಸಭೆಯನ್ನು ಮಾಡಿದೆ. ಪ್ರಮುಖವಾಗಿ ಇದನ್ನೇ ಚರ್ಚೆ ಮಾಡಿದೆ. ಪ್ರಮುಖವಾಗಿ ಇದನ್ನೇ ಚರ್ಚೆ ಮಾಡಿದೆ. ಏಳು ಜನ ಜಿಲ್ಲಾಧಿಕಾರಿಗಳು ಏಳು ಕಡೆ ಬರುತ್ತಾರೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ಗೋಶಾಲೆಯ ಬಗ್ಗೆ ಮಾತನಾಡಿ ಅದರ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕಳುಹಿಸಿದ್ದೇನೆ. ಇನ್ನೂ ಮೂರು ವಿಭಾಗಗಳಲ್ಲಿ ಪ್ರಾದೇಶಿಕ ಆಯುಕ್ತರ ಸಮ್ಮುಖದಲ್ಲಿ ಒಂದು ಸಭೆಯನ್ನು ಕರೆಯಬೇಕೆಂದು ಮಾಡಿದ್ದೇವೆ. ಸಮಯದ ಅಭಾವದಿಂದ ಅದನ್ನು ಮಾಡಲಿಕ್ಕೆ ಆಗಲಿಲ್ಲ. ಈಗ ಒಂದು ಮಾಡಿ ತಿಳಿದುಕೊಂಡಿದ್ದೇನೆ. ಅದರ ಆಧಾರ ಮೇಲೆ ಎಲ್ಲರಿಗೂ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಎ.ಎಸ್.ಪಾಟೀಲ್‌ರವರು ಮಾತನಾಡುವುದು. ಈಗ 5.30 ಗಂಟೆ ಆಯಿತು. ಅರ್ಧ ಗಂಟೆಗೆ ಇನ್ನೊಂದು subject ಇದೆ.

(ಗೊಂದಲ)

ಶ್ರೀ ಸಾ. ರಾ. ಮಹೇಶ್ (ಕೃಷ್ಣರಾಜನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಜಿಲ್ಲೆಗೆ ಸಂಬಂಧಿಸಿದ್ದು, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತಂದರೆ ಅವರು solve ಮಾಡುತ್ತಾರೆ. ನಮ್ಮದು ಬರ ಜಿಲ್ಲೆ ಎಂದು declare ಮಾಡಿದ್ದಾರೆ. ನಿಯಮಾನುಸಾರ declare ಮಾಡಿದ್ದೀರಿ. ಈಗ ಬೇರೆ ಜಿಲ್ಲೆಯ ವಿಚಾರ ಹೇಳಿದಿರಿ. ನೀವೇ ಉಸ್ತುವಾರಿ ಸಚಿವರು ಇರುವುದು, ಮುಖ್ಯಮಂತ್ರಿಗಳು ಇರುವಂತಹ ನಮ್ಮ ತಾಲ್ಲೂಕು. Task-force ನಿಂದ ಕಳುಹಿಸಿ 3 ದಿವಸ ಆಯಿತು. ಇನ್ನೂ approval ಆಗಿ ಬಂದಿಲ್ಲ. ಜಿಲ್ಲಾಧಿಕಾರಿಗಳು 30 ದಿವಸದಿಂದ file ಇಟ್ಟುಕೊಂಡಿದ್ದಾರೆ. ನಿಮ್ಮ ತಾಲ್ಲೂಕಿನದ್ದೇ. ನಾನು ಬಂದು ನಿಮ್ಮನ್ನು ಕೇಳಿದ್ದೆ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನೀವೂ ಬಂದಿದ್ದೀರಿ. ಮುಖ್ಯಮಂತ್ರಿಗಳ ಜಿಲ್ಲೆ, Revenue Minister ನವರ ಜಿಲ್ಲೆ ಕೂಡು ಆಗಿದೆ. ಮುಖ್ಯಮಂತ್ರಿಗಳೇ ವಿಶೇಷ ಆಸಕ್ತಿ ವಹಿಸಿ ಆ ಜಿಲ್ಲೆಯಲ್ಲಿ ಕೆ.ಡಿ.ಪಿ. ಮೀಟಿಂಗ್ ಮಾಡಿ ಎಂದು ಹೇಳಿದರು. ನಾವು ಕೆ.ಡಿ.ಪಿ. ಮೀಟಿಂಗ್ ಮಾಡಿ ಸಂಪೂರ್ಣವಾಗಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ಗೋಶಾಲೆಗಳ ಬಗ್ಗೆ, ಕೈಗೆ ಕೆಲಸದ ಬಗ್ಗೆ ಪ್ರತಿಯೊಬ್ಬರ ಜೊತೆಯಲ್ಲಿಯೂ ನಾವು ಆವತ್ತು ಚರ್ಚೆ ಮಾಡಿದ್ದೇವೆ. ನಾನು ಮೈಸೂರಿನಲ್ಲಿ ಆಗಾಗ್ಗೆ ಜಿಲ್ಲಾಧಿಕಾರಿಗಳ ಜೊತೆ, ಮುಖ್ಯಮಂತ್ರಿಯವರು ಮತ್ತು ಸಂಬಂಧಪಟ್ಟಂತಹ ಖಾತೆಯ ಸಚಿವನಾಗಿ ನಾನು ನನ್ನ ಜಿಲ್ಲೆಯಲ್ಲಿರುವಂತಹ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಗಳು, ಎಲ್ಲರ ಜೊತೆಯಲ್ಲಿಯೂ ಕೂಡ ಆಗಾಗ್ಗೆ ಸಮಾಲೋಚನೆ ಮಾಡುತ್ತಿರುತ್ತೇನೆ. ಚರ್ಚೆ ಮಾಡುತ್ತಿರುತ್ತೇನೆ. ನಿಮ್ಮಗಳಿಗೂ ಸಹ ಬಂದಂತಹ ಸಂದರ್ಭದಲ್ಲಿ ಬೇರೆ ಸಭೆಯಲ್ಲಿ ಚರ್ಚೆ ಮಾಡುತ್ತಿರುತ್ತೇವೆ. ನಮ್ಮಲ್ಲಿ ಯಾವುದೇ ರೀತಿಯ ವಿರೋಧ ಪಕ್ಷದವರು ಎನ್ನುವ ತಾರತಮ್ಯ ಇಲ್ಲ. ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಏನೂ ತೊಂದರೆ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ Code of Conduct ಬರುವುದರಿಂದ ಬೇರೆ ಕೆಲಸಗಳಿಗೆ ತೊಂದರೆಯಾಗಬಾರದು. ಈಗ ಈ ಭರವಸೆಯ ಸಂದೇಶ ಹೋಗಬೇಕು. ಇಲ್ಲದಿದ್ದರೆ ಮತ್ತೆ ಅದೇ ಸಮಸ್ಯೆಯಾಗುತ್ತದೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಸಂದೇಶವನ್ನು ಕಳುಹಿಸಿ. ಮಾನ್ಯ ಎ.ಎಸ್. ಪಾಟೀಲ್‌ರವರು ಮಾತನಾಡುವುದು.

(2) ವಿಷಯ: ಅವಳಿ ಜಿಲ್ಲೆಗೆ ನೀರಾವರಿ ಯೋಜನೆಗಳಿ ನೀರಿನ ಹಂಚಿಕೆಯನ್ನು ಬಚಾವತ್ ತೀರ್ಪಿನಡಿಯಲ್ಲಿ ಹಂಚಿಕೆಯಾದ 173 ಟಿ.ಎಂ.ಸಿ ನೀರಿನಲ್ಲಿ ಕನಿಷ್ಠ 105 ಟಿ.ಎಂ.ಸಿ ನೀರನ್ನು ಮರುಹಂಚಿಕೆ ಮಾಡುವ ಬಗ್ಗೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ): ಮಾನ್ಯ ಅಧ್ಯಕ್ಷರೆ, ಬಚಾವತ್ ತೀರ್ಪಿನಲ್ಲಿ ಎ–ಸ್ಕೀಮ್‌ನಲ್ಲಿ ಹಂಚಿಕೆಯಾದಂತಹ ಸುಮಾರು 173 ಟಿ.ಎಂ.ಸಿ. ನೀರನ್ನು ಪುನಃ ಮರುಹಂಚಿಕೆ ಮಾಡಬೇಕು ಅದರಲ್ಲಿಯೂ ವಿಶೇಷವಾಗಿ ಅವಳಿ ಜಿಲ್ಲೆಗೆ ನೀರಿನ ಮರು ಹಂಚಿಕೆಯಾಗಬೇಕೆಂದು ನಾನು ನಿಯಮ 69 ರಲ್ಲಿ ತಮಗೆ ನೀಡಿದ್ದೇನೆ. ಅದಕ್ಕಾಗಿ ತಾವು ಮಾತನಾಡಲು ಅವಕಾಶ ಕೊಟ್ಟಿದ್ದರಿಂದ ತಮಗೆ ಧನ್ಯವಾದಗಳು.

ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಏಕೆ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆಂದರೆ, ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಕೃಷ್ಣಾ ನದಿಯ ತೀರ್ಪಿನಲ್ಲಿ ಏನು ನೀರಿನ ಹಂಚಿಕೆಯಲ್ಲಿ ಕರ್ನಾಟಕ ರಾಜ್ಯಕ್ಕೆ